# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES
KANNADA DAILY

ಕನ್ನಡ ದಿನಪತ್ರಿಕೆ



Good Opportunity for Branding
1,25,000+
Digital E-PAPER READERS
No.1 HAMPI TIMES LEADING PRINT & DIGITAL District News Paper
Call Us for Advertisements: 9448633038




epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026


ಸಂಪುಟ:02 • ಸಂಚಿಕೆ: 253 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 13.04.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 253 • PRGI No:KARKAN/2023/88055 • VIJAYANAGARA • 13.04.2025 • Sunday • Page:04 • Rs:2


# ಹಂಪಿಯಲ್ಲಿ ಭಕ್ತಿಯ ಮಹಾಸಂಗಮ

## ಶ್ರೀ ಪಂಪಾ ವಿರೂಪಾಕ್ಷ, ಶ್ರೀ ಚಂದ್ರಮೌಳೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವವನ್ನು ಶ್ರದ್ಧಾ ಭಕ್ತಿಯಿಂದ ಎಳೆದ ಭಕ್ತರು








**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ರಥಬೀದಿಯಲ್ಲಿ ಶ್ರೀ ವಿರೂಪಾಕ್ಷೇಶ್ವರ ಹಾಗೂ ಶ್ರೀ ಚಂದ್ರಮೌಳೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ಶನಿವಾರ ಸಂಜೆ ಶ್ರದ್ಧಾ ಭಕ್ತಿ ಹಾಗೂ ವಿಜೃಂಭಣೆಯಿಂದ ಜರುಗಿತು.

ಶ್ರೀ ವಿರೂಪಾಕ್ಷೇಶ್ವರ ಸ್ವಾಮಿಗೆ ದವನದ ಹುಣ್ಣಿಮೆ ಬೆಳಿಗ್ಗೆ ವಿಶೇಷ ಪೂಜೆ, ಅಭಿಷೇಕ ಸಲ್ಲಿಸಲಾಯಿತು. ವಿಜಯನಗರ ಅರಸ ಶ್ರೀಕೃಷ್ಣದೇವರಾಯ ಪಟ್ಟಾಭಿಷೇಕ ಸಂದರ್ಭದಲ್ಲಿ ವಿರೂಪಾಕ್ಷೇಶ್ವರನಿಗೆ ನೀಡಿದ ಕಾಣಿಕೆ ಸ್ವರ್ಣ ರತ್ನಖಚಿತ ಮುಖಕವಚ, ಕಿರೀಟ, ಪುಷ್ಪ, ರೇಶ್ಮೆ ವಸ್ತ್ರಗಳಿಂದ ಆಲಂಕರಿಸಲಾಯಿತು. ದೇವಸ್ಥಾನದ ಆವರಣದಲ್ಲಿರುವ ಶ್ರೀ ಪಂಪಾಂಬಿಕೆ ಮತ್ತು ಶ್ರೀ ಭುವನೇಶ್ವರಿ ದೇವಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಬೆಳಿಗ್ಗೆ ಮಡಿತೇರು ಎಳೆದರು. ಭಕ್ತರು ಬೆಳಿಗ್ಗೆಯಿಂದಲೇ ಸಾಗರೋಪಾದಿಯಲ್ಲಿ ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆದರು. ಸಂಜೆ ಶ್ರೀ ಸ್ವಾಮಿಗಳ ರಥೋತ್ಸವಕ್ಕೆ ಹೂ-ಹಣ್ಣು ಕಾಯಿ ಸಮರ್ಪಿಸಿ ಭಕ್ತಿ ಸಮರ್ಪಿಸಿದರು. ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡಿನಿಂದಲೂ ಭಕ್ತರು ಆಗಮಿಸಿದ್ದರು. ವಿದೇಶಿಗರು ರಥೋತ್ಸವದಲ್ಲಿ ಪಾಲ್ಗೊಂಡು ಹೂ-ಹಣ್ಣು ಎಸೆದು ನಮಿಸಿದರು. ಜಿಲ್ಲಾಡಳಿತದಿಂದ ಭಕ್ತರಿಗೆ ಮೂಲ ಭೂತ ಸೌಕರ್ಯಗಳನ್ನು ಕಲ್ಪಿಸಲಾಗಿತ್ತು. ಪೊಲೀಸರು ಭದ್ರತೆ ಒದಗಿಸಿದ್ದರು. ಬಂಡೆಗಲ್ಲುಗಳ ಮೇಲೇರಿ ತೇರು ವೀಕ್ಷಿಸಿದರು.





# ಹುಬ್ಬಳ್ಳಿ-ಧಾರವಾಡ ನಡುವೆ ವಿದ್ಯುತ್ ಚಾಲಿತ ಕ್ಷಿಪ್ರ ಸಾರಿಗೆ ಡಿಪಿಆರ್ ಸಿದ್ಧಪಡಿಸಿ: ಸಿಎಂ

## ಸಚಿವ ಸಂತೋಷ್ ಲಾಡ್‌ರಿಂದ ಸ್ವಿಡ್ಜರ್ಲ್ಯಾಂಡ್‌ನಲ್ಲಿ ಯೋಜನೆಯ ಪ್ರಾಯೋಗಿಕ ಯಶಸ್ಸಿನ ಅಧ್ಯಯನ



**ಹಂಪಿ ಟೈಮ್ಸ್ ಬೆಂಗಳೂರು**

ಎಲೆಕ್ಟ್ರಿಕ್ ರಾಪಿಡ್ ಟ್ರಾನ್ಸಿಟ್ (e-RT) ಆರಂಭಿಸುವ ಕುರಿತು HESS AG, HESS INDIA ಮತ್ತು SSB AG ಸಂಸ್ಥೆಗಳೊಂದಿಗೆ ಪರಸ್ಪರ ಒಡಂಬಡಿಕೆಗೆ ಸಹಿ ಹಾಕಾಲಾಯಿತು.

ಸ್ವಿಡ್ಜರ್ಲ್ಯಾಂಡ್‌ಗೆ ಹೋಗಿ ಯೋಜನೆಯ ಪ್ರಾಯೋಗಿಕ ಯಶಸ್ಸನ್ನು ಅಧ್ಯಯನ ನಡೆಸಿದ್ದ ಸಚಿವ ಸಂತೋಷ್ ಲಾಡ್ ಮುಖ್ಯಮಂತ್ರಿಗಳಿಗೆ ಉದ್ದೇಶಿತ ಯೋಜನೆಯ ಸಾಧ್ಯಾ ಸಾಧ್ಯತೆಗಳನ್ನು, ಅವಕಾಶಗಳನ್ನು ವಿವರಿಸಿದರು.

ಹುಬ್ಬಳ್ಳಿ ಧಾರವಾಡದಲ್ಲಿ ವಿದ್ಯುತ್ ಚಾಲಿತ ಕ್ಷಿಪ್ರ ಸಾರಿಗೆ ಯೋಜನೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಶನಿವಾರ ಕಾವೇರಿಯಲ್ಲಿ ನಡೆದ ಸಭೆಯ ಇತರೆ ಮುಖ್ಯಾಂಶಗಳು:

- ಹುಬ್ಬಳ್ಳಿ ಧಾರವಾಡ ನಡುವೆ ಪ್ರಾಯೋಗಿಕವಾಗಿ ವಿದ್ಯುತ್ ಚಾಲಿತ ಕ್ಷಿಪ್ರ ಸಾರಿಗೆ ಯೋಜನೆ ಎಲೆಕ್ಟ್ರಿಕ್ ರಾಪಿಡ್ ಟ್ರಾನ್ಸಿಟ್ (e-RT) ಆರಂಭಿಸುವ ಕುರಿತು HESS AG, HESS INDIA ಮತ್ತು SSB AG ಸಂಸ್ಥೆಗಳೊಂದಿಗೆ ಪರಸ್ಪರ ಒಡಂಬಡಿಕೆಗೆ ಸಹಿ ಹಾಕಲಾಯಿತು.
- ಯೋಜನೆ ಅನುಷ್ಠಾನ ಕುರಿತು ಮೂರು ತಿಂಗಳ ಒಳಗಾಗಿ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಮುಖ್ಯಮಂತ್ರಿ ಅವರು ಸೂಚನೆ ನೀಡಿದರು.
- ಇದು ಸಂಪೂರ್ಣ ವಿದ್ಯುತ್ ಚಾಲಿತ ವ್ಯವಸ್ಥೆಯಾಗಿದ್ದು ನಗರದಲ್ಲಿ ಎತ್ತರಿಸಿದ ರಸ್ತೆ ಹಾಗೂ ಇತರೆಡೆ ನೆಲದ ಮೇಲೆ ಸಂಚರಿಸಲಿದೆ. ಇದರಲ್ಲಿ 250 ಜನರು ಒಮ್ಮೆಗೆ ಪ್ರಯಾಣಿಸಬಹುದಾಗಿದೆ. ಕಳೆದ ಒಂದು ವರ್ಷದಿಂದ ಯೋಜನೆ ಕಾರ್ಯ ಸಾಧ್ಯತೆ ಬಗ್ಗೆ ಅಧ್ಯಯನ ನಡೆಸಲಾಗಿದೆ.
- ಮೆಟ್ರೋ ಮಾದರಿಯ ಈ ಸಂಚಾರಿ ವ್ಯವಸ್ಥೆ ಯುರೋಪಿನ ಹಲವು ರಾಷ್ಟ್ರಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ ಎಂದು ಸಂಸ್ಥೆಗಳ ಪ್ರತಿನಿಧಿಗಳು ಮಾಹಿತಿ ನೀಡಿದರು.
- ಹುಬ್ಬಳ್ಳಿ ಧಾರವಾಡದಲ್ಲಿ ಈ ಯೋಜನೆ ಯಶಸ್ವಿಯಾದರೆ, ರಾಜ್ಯದ ಇತರ ಎರಡನೇ ಹಂತದ ನಗರಗಳಿಗೂ ಇದನ್ನು ವಿಸ್ತರಿಸಬಹುದಾಗಿದೆ ಎಂದು ಮುಖ್ಯಮಂತ್ರಿ ಅವರು ಹೇಳಿದರು.
- ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಕಾರ್ಮಿಕ ಸಚಿವ ಸಂತೋಷ್ ಲಾಡ್, ಸಮಾಜ ಕಲ್ಯಾಣ ಸಚಿವ ಮಹಾದೇವಪ್ಪ, ಅಡ್ವಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್‌ಇಎಸ್ಸೆಸ್ ಎಜಿ ಸಂಸ್ಥೆಯ ಸುಸಾನ್ ವಾನ್ ಸುರಿ, ಎಸ್ಸೆಸ್ಬಿ ಸಂಸ್ಥೆಯ ನಿರ್ದೇಶಕ ಬುರಾಕ್ ಸೆನಸರ್ ಮತ್ತಿತರರು ಉಪಸ್ಥಿತರಿದ್ದರು.





## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


## ಹನುಮಾನ್ ಚಾಲೀಸಾ...

# ರಾಮದೂತ ಹನುಮನ ಅಷ್ಟಸಿದ್ಧಿಗಳು

**ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ**



ನಾನು ನೋಡಿದ ಚಾಕ್ ಅಂಡ್ ಡಸ್ಟರ್ ಎಂಬ ಹಿಂದಿ ಚಲನಚಿತ್ರ ಶಿಕ್ಷಕರ ಮಹತ್ವವನ್ನು ತೋರುತ್ತದೆ. ಈ ಚಿತ್ರದಲ್ಲಿ ಶಿಕ್ಷಕರ ಜಾಣ್ಮೆಯನ್ನು ಪರೀಕ್ಷಿಸುವ ಒಂದು ಪ್ರಶ್ನೆ ಹನುಮಾನ್ ಚಾಲೀಸಾ ದಲ್ಲಿರುವ ಬ್ರಹ್ಮಾಂಡದ ಕುರಿತ ರಹಸ್ಯ ಯಾವುದು,.... ಉತ್ತರ ಸಿಗುವುದಿಲ್ಲ ಎಂದು ಎಲ್ಲರೂ ಗಾಬರಿಯಾದಾಗ ಶಿಕ್ಷಕಿ ಹನುಮಾನ್ ಚಾಲೀಸಾದ

*ಯುಗ ಸಹಸ್ರಯೋಜನ ಪರ್ ಜಾನೂ
ಲೀಲ್ಯೋ ತೋ ಹೀ ಮಧುರ ಫಲ ಮಾನು*

ನುಡಿಯನ್ನು ಉಚ್ಚರಿಸುತ್ತಾ ಸೂರ್ಯ ಮತ್ತು ಭೂಮಿಯ ನಡುವಿನ ದೂರವನ್ನು ಲೆಕ್ಕ ಹಾಕಿ ಹೇಳಿ ಜಯಭೇರಿ ಗಳಿಸಿದರು. ಸುಮಾರು ಆರು ಶತಮಾನಗಳ ಹಿಂದೆಯೇ ತುಳಸಿದಾಸರು ರಚಿಸಿದ ಹನುಮಾನ್ ಚಾಲೀಸಾದಲ್ಲಿ ಇರುವ ಉಲ್ಲೇಖವು ಖಗೋಳ ವಿಜ್ಞಾನಿ ಗೆಲಿಲಿಯೋ ಹೇಳುವುದಕ್ಕೂ ಸರಿಸುಮಾರು ಐವತ್ತು ವರ್ಷಗಳ ಮುಂಚೆಯೇ ಹೇಳಿದ್ದು ನಮ್ಮ ಭಾರತೀಯ ವಿಜ್ಞಾನಿಗಳ ತಾಕತ್ತು. ಕ್ರಿಸ್ತಶಕ 1511 ರಲ್ಲಿ ರಾಮಬೋಲಾ ದುಬೆ ಅಯೋಧ್ಯೆಯ ರಾಜಾಪುರದಲ್ಲಿ ಜನಿಸಿದರು.

ಇವರ ಪೂರ್ವ ನಾಮ ಗೋಸ್ವಾಮಿ ತುಳಸಿದಾಸ ಎಂದು. ತಂದೆ ಆತ್ಮರಾಮ ದುಬೆ ತಾಯಿ ಹುಲಸಿ ದುಬೆ. ಇವರು ಶ್ರೀ ವೈಷ್ಣವ ಪಂಥದ ಬ್ರಾಹ್ಮಣರಾಗಿದ್ದರು. ತಮ್ಮ ಶಿಕ್ಷಣವನ್ನು ಅಯೋಧ್ಯೆಯಲ್ಲಿಯೇ ಪೂರೈಸಿದ ತುಳಸಿದಾಸರು ಪ್ರಾಪ್ತವಯಸ್ಕರಾದಾಗ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಪತ್ನಿ ರತ್ನಾವಳಿಯ ಮೇಲಿನ ಅಗಾಧ ಮೋಹದಲ್ಲಿ ಮತ್ತರಾದ ತುಳಸಿದಾಸರ ಜ್ಞಾನದ ಕಣ್ಣು ತೆರೆಸಿದ್ದು ಅವರ ಪತ್ನಿಯೇ. ನನ್ನ ಮೇಲಿರುವ ಪ್ರೀತಿಯನ್ನು ಪ್ರಭು ಶ್ರೀ ರಾಮನೆಡೆ ತಿರುಗಿಸು ನಿನಗೆ ದೈವ ದರ್ಶನವಾಗುತ್ತದೆ ಎಂದು ಪತಿಗೆ ಹೇಳಿದ ಮಹಾನ್ ಸಂತಳು ಆಕೆ. ಮುಂದೆ ತುಳಸಿದಾಸರು ಮಹಾನ್ ರಾಮಭಕ್ತರಾಗಿ ಪರಿವರ್ತಿತರಾದರು. ರಾಮಚರಿತ ಮಾನಸ, ಹನುಮಾನ್ ಚಾಲೀಸಾ, ವಿನಯ ಪತ್ರಿಕ, ಗೀತಾವಳಿ, ದೋಹಾವಳಿ, ವೈರಾಗ್ಯ ಸಂದೀಪನಿ,ಜಾನಕಿ ಮಂಗಲ, ಪಾರ್ವತಿ ಮಂಗಲ ಮುಂತಾದ ಕೃತಿಗಳನ್ನು ರಚಿಸಿದರು.

ಅವರು ಹನುಮಾನ್ ಚಾಲೀಸಾ ಬರೆದದ್ದು ಕೂಡ ಒಂದು ಮಹಾನ್ ಸಾಹಸವೇ ಸರಿ. ಮಹಾನ್ ಸಂತರಾದ ತುಳಸಿ ದಾಸರ ನಡೆಯನ್ನು ಒಪ್ಪದ ಮೊಘಲ್ ದೊರೆ ಅಕ್ಬರನು ತನ್ನ ಮತ್ತು ತುಳಸಿದಾಸರ ನಡುವೆ ನಡೆದ ವಾಗ್ವಾದದ ನಂತರ ತುಳಸಿದಾಸರನ್ನು ಸೆರೆಯಲ್ಲಿಟ್ಟು ನಿನ್ನ ಹನುಮನೇ ಬಂದು ನಿನ್ನನ್ನು ಬಿಡಿಸಿಕೊಂಡು ಹೋಗಲಿ ಎಂದು ಹೇಳಿದನು. ಅಂದಿನಿಂದ ಸುಮಾರು 40 ದಿನಗಳ



ಕಾಲ ತುಳಸಿದಾಸರು ಸೆರೆಮನೆಯ ಗೋಡೆಗಳ ಮೇಲೆ ಪ್ರತಿ ದಿನ ಒಂದೊಂದರಂತೆ ಹನುಮಾನ್ ಚಾಲೀಸಾದ 40 ನುಡಿಗಳನ್ನು ಬರೆಯುತ್ತಾ ಹೋದರು. 40ನೇ ದಿನ ಸಾವಿರಾರು, ಲಕ್ಷಾಂತರ ಮಂಗಗಳು ರಾಜಧಾನಿ ದೆಹಲಿ ನಗರವನ್ನು ಆವರಿಸಿಕೊಂಡು ಮನೆ ಮನೆಗಳಲ್ಲಿ ಉಪಟಳವನ್ನು ನೀಡಲಾರಂಭಿಸಿದವು. ಖುದ್ದು ಬಾದಶಹನಾದ ಅಕ್ಬರನಿಗೂ ಕೂಡ ಕಪಿಗಳ ಕೋಟಲೆಯ ಬಿಸಿಯು ತಟ್ಟಿತು. ಆಗ ಸಂತ ತುಳಸಿದಾಸರನ್ನ ಸೆರೆಮನೆಯಿಂದ ಬಿಡಿಸಿ ಗೌರವ ಪೂರ್ವಕವಾಗಿ ಅರಮನೆಗೆ ಕರೆಸಿ ಅವರಿಗೆ ರಾಜಾತಿಥ್ಯವನ್ನು ನೀಡಿ ಸನ್ಮಾನಿಸಿ ಅಕ್ಬರನೆ ಕಳುಹಿಸಿಕೊಟ್ಟನು. ಇದು ಹನುಮಾನ್ ಚಾಲೀಸಾ ಬರೆದ ಸಂತ ತುಳಸಿದಾಸರ ಶಕ್ತಿಯಾದರೆ, ಹನುಮಾನ್ ಚಾಲೀಸಾದ ಒಂದೊಂದು ನುಡಿಯು ಅತ್ಯಂತ ಸಶಕ್ತವಾದುದು.

ಇವು ಕೇವಲ ಎರಡು ಸಾಲಿನ 40 ನುಡಿಗಳಲ್ಲ. ಪ್ರತಿಯೊಂದು ನುಡಿಯಲ್ಲು ಪ್ರಭು ಶ್ರೀ ರಾಮನ ದೂತನಾದ ಹನುಮನ ವರ್ಣನೆ ಇದೆ, ಆತ ನಡೆದು ಬಂದ ಹಾದಿಯಿದೆ, ಆತನ ಜೀವಿತದ ಅಗಾಧತೆಯ ಅರಿವಿದೆ.

ಈಗ ನಾವು ಹೇಳುವ ನ್ಯಾನೋ ಟೆಕ್ನಾಲಜಿಗೆ ಬಂದರೆ.... ನಮ್ಮ ರಾಮದೂತ ಹನುಮನು ಅಗಾಧ ಶಕ್ತಿವಂತ ಈತ ಅಷ್ಟ ಸಿದ್ದಿಗಳನ್ನು ಹೊಂದಿದ್ದ. ಆ ಅಷ್ಟಸಿದ್ದಿಗಳು ಯಾವುವೆಂದರೆ

**ಅಣಿಮಾ** ... ಅಣುವಿಗಿಂತ ಚಿಕ್ಕದಾದ ಶರೀರವನ್ನು ಹೊಂದುವುದು
**ಲಘಿಮಾ**... ಅತ್ಯಂತ ಹಗುರವಾಗಿ ಗಾಳಿಯಲ್ಲಿ ತೇಲುವ ಶಕ್ತಿಯನ್ನು ಹೊಂದುವುದು
**ಗರಿಮಾ**.... ಬೃಹತ್ ಶರೀರವನ್ನು ಹೊಂದುವುದು
**ಮಹಿಮಾ**.... ಮಹತ್ತರವಾದ ಶಕ್ತಿಯನ್ನು ಹೊಂದಿರುವುದು
**ಲಘಿಮಾ**... ಅತ್ಯಂತ ಹಗುರವಾಗಿ ಗಾಳಿಯಲ್ಲಿ ತೇಲುವ ಶಕ್ತಿಯನ್ನು ಹೊಂದುವುದು
**ಪ್ರಾಪ್ತಿ**....ಎಲ್ಲ ಸ್ಥಳಗಳಲ್ಲಿ ಅನಿರ್ಬಂಧಿತವಾದ ಪ್ರವೇಶ ದೊರಕಿಸಿಕೊಳ್ಳುವದು
**ಪ್ರಾಕಾಮ್ಯ**... ಇಷ್ಟಪಟ್ಟಿದ್ದನ್ನು/ಬಯಸಿದ್ದನ್ನು ದೊರಕಿಸಿಕೊಳ್ಳುವದು
ಈಶಿತ್ವ – ಎಲ್ಲದರ ಮೇಲೆ ಸಂಪೂರ್ಣವಾದ ಒಡೆತನ ಹೊಂದುವದು/ ಅಧಿಕಾರ ಹೊಂದುವುದು
**ವಶಿತ್ವ**.... ಎಲ್ಲವನ್ನು ಜಯಿಸುವ ಶಕ್ತಿ ಹೊಂದುವದು/ಮನಸ್ಸಿನ ಮೇಲೆ ಕೂಡ ಜಯಗಳಿಸುವುದು. ಅಷ್ಟ ಸಿದ್ಧಿಗಳನ್ನು ಪಡೆದ ಹನುಮನು ತನ್ನ ದೇಹವನ್ನು ಅಣುವಿನಷ್ಟೇ ಚಿಕ್ಕದಾಗಿಸಿ ಕೊಳ್ಳಬಲ್ಲವನಾಗಿ, ಅತ್ಯಂತ ದೊಡ್ಡ ಶರೀರವನ್ನು ಕೂಡ ಹೊಂದಬಲ್ಲವನಾಗಿದ್ದ.

ಲಂಕೆಗೆ ಸೀತಾನ್ವೇಷಣೆಗಾಗಿ ಹಾರಿ ಹೋಗುವಾಗ ಆಂಜನೇಯ ಈ ಅಷ್ಟ ಸಿದ್ಧಿಗಳನ್ನು ಬಳಸಿದ. ಅತ್ಯಂತ ಹಿರಿದಾದ ದೇಹವನ್ನು ಹೊಂದಿದ್ದರೂ ಕೂಡ ಅತ್ಯಂತ ಹಗುರವಾದ ಶರೀರವನ್ನಾಗಿಸಿಕೊಂಡು ಸಮುದ್ರ ಲಂಘನ ಮಾಡಿದ. ಶ್ರೀರಾಮಚಂದ್ರ ಸಹೋದರ ಲಕ್ಷ್ಮಣನು ಯುದ್ಧದಲ್ಲಿ ಇಂದ್ರಜಿತು ಹೊಡೆದ ಬಾಣಕ್ಕೆ ಮೂರ್ಛೆ ಹೋದಾಗ ಆತನನ್ನು ಬದುಕಿಸಲು ಅವಶ್ಯಕವಾದ ಸಂಜೀವಿನಿ ಸಸ್ಯವನ್ನು ತರಲು ಇಡೀ ಪರ್ವತವನ್ನೇ ಹೊತ್ತು ತಂದಾತ ಆಂಜನೇಯ. ಇಂದಿಗೂ ಹನುಮನ ಪೂಜೆ ಹಳ್ಳಿಯಿಂದ ದಿಲ್ಲಿಯವರೆಗೆ ಎಲ್ಲಾ ಊರುಗಳಲ್ಲಿ ನಡೆಯುತ್ತದೆ. ಕಷ್ಟ, ಭಯ, ಭೂತ ಚೇಷ್ಟೆಗಳು, ರೋಗ ರುಜಿನಗಳು, ಗಾಳಿಯ ಸೋಂಕು ಏಕೆ ಎಲ್ಲಾ ತೊಂದರೆಗಳಿಗೂ ಹನುಮನೆ ಪರಿಹಾರ.

ನಾಲ್ಕು ಯುಗಗಳಲ್ಲಿಯೂ ಪೂಜಿಸಲ್ಪಡುತ್ತಿರುವ ಏಕೈಕ ದೇವರು... ಅದು ಹನುಮ. ಸಾಧು ಸಂತರನ್ನು ಕಾಯುವ ಮತ್ತು ರಕ್ಕಸರನ್ನು ಶಿಕ್ಷಿಸುವ ದೇವರು ಹನುಮ.ಸಂಕಟಹರ, ರಾಮಭಕ್ತ, ಮೂರು ಲೋಕಗಳಲ್ಲಿ ಪೂಜಿಸಲ್ಪಡುವ ಹನುಮ ನಮ್ಮನ್ನು ರಕ್ಷಿಸಲಿ.

**ಬುದ್ಧಿರ್ಬಲಂ ಯಶೋಧೈರ್ಯಂ
ನಿರ್ಭಯತ್ವಂ ಮರೋಗತಹ
ಅಜಾಡ್ಯಂ ವಾಕ್ಪಟುತ್ವಂ ಚ
ಹನುಮದ್ ಸ್ಮರಣಾದ್ಭವೇತ್**

ಬುದ್ಧಿಯ ಬಲವನ್ನು ಹೆಚ್ಚಿಸುವ ಯಶಸ್ಸನ್ನು ಧೈರ್ಯವನ್ನು ಕೊಡುವ ನಿರ್ಭಯನಾಗುವಂತ ಶಕ್ತಿಯನ್ನು ನೀಡುವ ರೋಗರಹಿತವಾದ, ಉತ್ತಮ ಸ್ಮರಣ ಶಕ್ತಿ, ಮಾತಿನ ಶಕ್ತಿಯನ್ನು ಕೊಡುವ ಹನುಮಂತನನ್ನು ಪ್ರತಿದಿನ ಭಜಿಸಿ ಪೂಜಿಸುವ, ನೆನೆಸುವ.

# ಕದಳಿಯ ಕರ್ಪೂರ ಮಹಾದೇವಿಯಕ್ಕ

**ಡಾ. ರೇಖಾ ಪಾಟೀಲ, ರಾಯಚೂರು**



"ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ
ಅಜಗಣ್ಣನ ಐದು ವಚನಕ್ಕೆ ಕೂಡಲ ಚೆನ್ನಸಂಗಮದೇವ ಮಹಾದೇವಿಯಕ್ಕನ ಒಂದು ವಚನ ನಿರ್ವಚನ"

ವೀರ ವಿರಾಗಿಣಿ, ಕದಳಿಯ ಕರ್ಪೂರ, ಕನ್ನಡದ ಕೋಗಿಲೆ, ಪ್ರಥಮ ಕವಿಯತ್ರಿ, ಸ್ವತಂತ್ರ ವಿಚಾರವಾದಿ, ಅತುಲ ಛಲಗಾರ್ತಿ ಹೀಗೆ ನಾನಾ ವಿಧವಾಗಿ ಸಂಭೋದಿಸಲ್ಪಟ್ಟ ಅಕ್ಕಮಹಾದೇವಿ ಕನ್ನಡ ನಾಡಿನ ಒಂದು ಅಪೂರ್ವ ಕೊಡುಗೆ. ಕನ್ನಡ ಸಾಹಿತ್ಯದಲ್ಲಿ ಬಸವಣ್ಣನ ನಂತರ ಅತಿ ಹೆಚ್ಚು ಬರಹದ ವಸ್ತುವಾದವರು.ಕರ್ನಾಟಕದ ಮಹಿಳಾ ವಿಶ್ವವಿದ್ಯಾಲಯವು ಪ್ರಸ್ತುತ ಅಕ್ಕಮಹಾದೇವಿಯ ಹೆಸರಲ್ಲಿ ಕಂಗೊಳಿಸುತ್ತಿದೆ. ಅಕ್ಕನ ಬಗ್ಗೆ ಹಲವಾರು ಪಿ ಎಚ್ ಡಿ ಪ್ರಬಂಧಗಳು ಮಾತ್ರವಲ್ಲ ಸಹಸ್ರಾರು ಲೇಖನಗಳು ಪ್ರಬಂಧಗಳು ಪುಸ್ತಕಗಳು ಪ್ರಕಟವಾಗಿರುವುದೇ ಸಾಕ್ಷಿ.

ಪುರುಷ ಪ್ರಧಾನ ವೈದಿಕ ಸಂಸ್ಕೃತಿಯಲ್ಲಿ ಹೆಣ್ಣು ಅಬಲೆ, ಅಧ್ಯಾತ್ಮ ಸಾಧನೆಯಲ್ಲಿ ಒಂದು ಅಡ್ಡಿ, ಹೆಣ್ಣು ಮಾಯೆ ಎನ್ನುವ ಪರಿಕಲ್ಪನೆಗೆ ಹೊಸ ವ್ಯಾಖ್ಯಾನ ಕೊಟ್ಟವರು ಶರಣರು. ಹೆಣ್ಣು ಮಾಯೆಯಲ್ಲ ಮನದ ಮುಂದಿನ ಆಸೆಯೇ ಮಾಯೆ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ಸಾಕ್ಷಾತ್ ಮಹಾದೇವಿ ಎಂದು ಹೆಣ್ಣನ್ನು ಅತ್ಯುನ್ನತ ಸ್ಥಾನದಲ್ಲಿರಿಸಿ ಗೌರವಿಸಿದವರು ಶರಣರು. ಮೊಲೆ ಮುಡಿ ಬಂದರೆ ಹೆಣ್ಣೆಂಬರು ಮೀಸೆ ಕಾಸೆ ಬಂದರೆ ಗಂಡೆಂಬರು ಒಳಗೆ ಸುಳಿವ ಆತ್ಮ ಒಂದೇ ಎಂದು ಸ್ತ್ರೀಯರು ಪುರುಷರೊಡನೆ ಸಮಾನವಾಗಿ ಸಮಾಜದ ಎಲ್ಲಾ ನೆಲೆಗಳಲ್ಲಿ ಬದುಕಲು ಅವಕಾಶ ಕಲ್ಪಿಸಿದರು. ಅನುಭವ ಮಂಟಪದ ಕಮ್ಮಟದಲ್ಲಿ ಸ್ತ್ರೀಯರು ಪುರುಷರೊಂದಿಗೆ ಸಮಾನವಾಗಿ ತತ್ವ ಚಿಂತನೆ ಸಮಾಜ ಚಿಂತನೆ ಆಧ್ಯಾತ್ಮ ಚಿಂತನೆ ಮಾಡಿದರು ಜ್ಞಾನದ ಬೀಜಗಳೇ ವಚನಗಳಾಗಿ ಬದುಕಿಗೆ ಬೆಳಕಾಗಿವೆ.

ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದ ಸಮೀಪ ಉಡುತಡಿ ಎಂಬ ಗ್ರಾಮದಲ್ಲಿ ವೀರ ವಿರಾಗಿಣಿಯ ಜನನವಾಯಿತು. ತಂದೆ ನಿರ್ಮಲ ಶೆಟ್ಟಿ ತಾಯಿ ಸುಮತಿ. ಕೆಲವು ಗ್ರಂಥಗಳಲ್ಲಿ ತಂದೆ ತಾಯಿಯ ಹೆಸರು ಓಂಕಾರ ಶೆಟ್ಟಿ ಮತ್ತು ಲಿಂಗಮ್ಮ ಎಂದಿದೆ. ತಂದೆ ತಾಯಿಗಳ ಪವಿತ್ರ ಸಂಸ್ಕಾರ ಮಹಾದೇವಿಯ ಬಾಲ್ಯದೊಂದಿಗೆ ಬೆಳೆದು ಬಂದಿತು. ಸರಳ ಉಡುಗೆ-ತೊಡುಗೆ, ಕೊರಳಲ್ಲಿ ಇಷ್ಟಲಿಂಗ ಹಣೆಯ ಮೇಲೆ ವಿಭೂತಿ ಗಂಧದ ತಿಲಕ, ಕಳೆ ತುಂಬಿದ ಮುಖದಿಂದ ಮಹಾದೇವಿ ಶೋಭಿಸುತ್ತಿದ್ದಳು. ಗುರುಲಿಂಗದೇವರಿಂದ ವಿದ್ಯಾಭ್ಯಾಸ ಮಾಡುತ್ತಾ ಶ್ರೀಶೈಲ ಕ್ಷೇತ್ರದ ವರ್ಣನೆ ಮಲ್ಲಿಕಾರ್ಜುನನ ದರ್ಶನದ ಕನಸು ಕಾಣುತ್ತಾ ಅಧ್ಯಾತ್ಮದ ಕಡೆಗೆ ಒಲವು ಹೆಚ್ಚುತ್ತಾ ಹೋಯಿತು. ಅಕ್ಕ ಕೇಳವ್ವ ನಾನೊಂದು ಕನಸು ಕಂಡೆ, ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ, ನಿರ್ಭಯ ಚೆಲುವನಾದ ಚೆನ್ನಮಲ್ಲಿಕಾರ್ಜುನನೇ ನನ್ನ ಗಂಡನೆಂದು ತನ್ನ ಬಂಧು ಬಳಗದವರು ಆತ್ಮೀಯರು ಅವಳ ಮದುವೆ ವಿಚಾರ ಪ್ರಸ್ತಾಪಿಸಿದಾಗ ಈ ರೀತಿಯಾಗಿ ಹೇಳುತ್ತಿದ್ದಳು. ಒಂದು ದಿನ ಉಡುತಡಿಯ ರಾಜ ಕೌಶಿಕ ಅಶ್ವಾರೂಢನಾಗಿ ಮೆರವಣಿಗೆಯಲ್ಲಿ ಸಾಗುತ್ತಿದ್ದಾಗ ಸಾತ್ವಿಕ ಕಳೆಯ ಮಹಾದೇವಿಯನ್ನು ನೋಡಿ ಸೌಂದರ್ಯಕ್ಕೆ ಮಾರುಹೋಗಿ ಅವಳನ್ನು ತನ್ನ ರಾಣಿಯನ್ನಾಗಿ ಮಾಡಿಕೊಳ್ಳುವ ಮನಸ್ಸು ಮಾಡಿದನು. ಇದನ್ನು ತಿಳಿದ ಅಕ್ಕನ ತಂದೆ ತಾಯಿಯಂದಿರಿಗೆ ಆಕಾಶವೇ ಕಳಚಿ ಬಿದ್ದಂತಾಯಿತು ಅರಸನ ಅಜ್ಞೆಯನ್ನು ಧಿಕ್ಕರಿಸುವುದು ಕಷ್ಟವಾಗಿ ಅಸಹಾಯಕ ಸ್ಥಿತಿಯಲ್ಲಿದ್ದ ತಂದೆ ತಾಯಿಯನ್ನು ಕಂಡ ಮಹಾದೇವಿ ಕೆಲವು ಷರತ್ತುಗಳೊಡನೆ ಮದುವೆಯಾಗಲು ಒಪ್ಪುತ್ತಾಳೆ. ಮಹಾದೇವಿಗೆ ಮನಸೋತ ಕೌಶಿಕನು ಷರತ್ತುಗಳಿಗೆ ಒಪ್ಪುತ್ತಾನೆ. ಆದರೆ ಲೌಕಿಕ ಸುಖ ಭೋಗಗಳ ಆಸಕ್ತನಾದ ಕೌಶಿಕ ರಾಜನು ಮಹಾದೇವಿ ವಿಧಿಸಿದ ಷರತ್ತನ್ನು ಮುರಿದನು. ಮಹಾದೇವಿ ಅವನನ್ನು ಧಿಕ್ಕರಿಸಿ ಮುತ್ತು ರತ್ನಗಳ ಅರಮನೆಯ ಐಶ್ವರ್ಯದ ಬಂಧನ ಬಿಡಿಸಿಕೊಂಡು ದಿವ್ಯ ವಸ್ತ್ರಾಭರಣಗಳನ್ನೆಲ್ಲ ಕಳಚಿ ಕೇಶಾಂಬರಿಯಾಗಿ (ವೈರಾಗ್ಯದ ಸಂಕೇತ) ವೈರಾಗ್ಯ ತಾಳಿ ಚೆನ್ನಮಲ್ಲಿಕಾರ್ಜುನನ್ನು ಸೇರುವ ಗುರಿಯೊಂದಿಗೆ ಬಿಟ್ಟು ಹೊರಡುತ್ತಾಳೆ. ಮತ್ತಷ್ಟು ಸಾಧನೆಗೈದು ಬಸವಾದಿ ಶರಣರ ಆಶೀರ್ವಾದ ಪಡೆಯಲು ಕಲ್ಯಾಣದ ಹಾದಿ ಹಿಡಿಯುತ್ತಾಳೆ.

ಹಸಿವಾದೊಡೆ ಭಿಕ್ಷಾನ್ನಗಳುಂಟು
**ತೃಷೆಯಾದೊಡೆ ಕೆರೆ ಬಾವಿಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಆತ್ಮಸಂಗಾತಕ್ಕೆ ಚೆನ್ನಮಲ್ಲಿಕಾರ್ಜುನನುಂಟು**

ಎಂದು ಹಸಿವು ನೀರಡಿಕೆಗಳ ಪರಿವೇ ಇಲ್ಲದೆ ಮುನ್ನಡೆದಳು. ಯಾವುದಕ್ಕೂ ಅಂಜದೆ ಅಳುಕದೆ ಬಂದ ಕಷ್ಟಗಳನ್ನೆಲ್ಲ ಸಹಿಸುತ್ತಾ ತನ್ನ ಗುರಿಯತ್ತ ಸಾಗುತ್ತಾಳೆ. ಅಳಿ ಸಂಕುಳವೆ, ಮಾಮರವೆ ನೀವು ಕಾಣಿರೆ, ಚಿಲಿಪಿಲಿ ಎಂದೋದುವ ಗಿಳಿಗಳಿರಾ ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ, ದುಂಬಿಗಳಿರಾ, ಹಂಸಗಳಿರಾ ನೀವು ಚೆನ್ನಮಲ್ಲಿ ಕಾರ್ಜುನನನ್ನು ಕಂಡಿರಾ? ಕಂಡಿದ್ದರೆ ನನಗೆ ತೋರಿರಿ ಎಂದು ವಿನಮ್ರತೆಯಿಂದ ಬೇಡುತ್ತಾಳೆ.

**ಹೆದರದಿರು ಮನವೆ
ಬೆದರದಿರು ಮನವೆ
ನಿಜವನರಿತು ನಿಶ್ಚಿಂತನಾಗಿರು**

ಎಂದು ತನಗೆ ತಾನೇ ಧೈರ್ಯ ಆತ್ಮಸ್ಥೈರ್ಯ ತಂದುಕೊಳ್ಳುತ್ತಾಳೆ. ಬಂದ ಕಷ್ಟಗಳನ್ನೆಲ್ಲ ದಿಟ್ಟತನದಿಂದ ಮೆಟ್ಟಿ ಕಲ್ಯಾಣ ಪಟ್ಟಣ ಸೇರಿ ಪ್ರಭುದೇವರು ವಿಧಿಸಿದ ಆಧ್ಯಾತ್ಮದ ಅಗ್ನಿಪರೀಕ್ಷೆಯಲ್ಲಿ ಗೆಲ್ಲುತ್ತಾಳೆ. ಅಕ್ಕನ ಅಗಾಧವಾದ ವ್ಯಕ್ತಿತ್ವಕ್ಕೆ ಮಾರು ಹೋದ ಅನುಭವ ಮಂಟಪ ಶರಣ ಶರಣೆಯರೆಲ್ಲ ಅಕ್ಕನನ್ನು ಆತ್ಮೀಯವಾಗಿ ಸ್ವಾಗತಿಸಿ, ಬರಮಾಡಿಕೊಳ್ಳುತ್ತಾರೆ. ಮಹಾದೇವಿ ಅಕ್ಕಳಾಗಿ ಅಂದಿನಿಂದ ಇಡೀ ಶರಣ ಸಂಕುಲಕ್ಕೆ ಮಹಾದೇವಿ ಅಕ್ಕಳಾಗಿದ್ದಾಳೆ. ಅನುಭವ ಮಂಟಪದ ಚಿಂತನಾಗೋಷ್ಠಿಗಳಲ್ಲಿ ಭಾಗವಹಿಸುತ್ತಾಳೆ. ಬದುಕಿನ ಅನುಭವಗಳಿಗೆ ವಚನಗಳ ಬರಹ ರೂಪ ಕೊಡುತ್ತಾಳೆ. ಶರಣರೊಡನೆ ಹಲವು ದಿನಗಳನ್ನು ಕಳೆಯುತ್ತಾಳೆ.

**ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಜ್ಞಾನ,
ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಲ,
ಅಜಗಣ್ಣನ ಐಕ್ಯಸ್ಥಲ, ನಿಜಗುಣನ ಆರೂಢಸ್ಥಲ
ಸಿದ್ದರಾಮಯ್ಯನ ಸಮಾಧಿ ಸ್ಥಲ,**

ಇಂತಿವರ ಕರುಣ ಪ್ರಸಾದ ಎನಗಾಯಿತ್ತು ಚೆನ್ನಮಲ್ಲಿಕಾರ್ಜುನಯ್ಯಾ, ಎಂದು ಸಕಲಶರಣರಿಗೆ ಕೃತಜ್ಞತೆ ಸಲ್ಲಿಸುತ್ತಾಳೆ. ಮಹಾಮನೆಯ ಸೇವೆ ಪೂರೈಸಿದ ಅಕ್ಕ "ನಾನು ನಿಜವನ್ನೈದುವ ಠಾವ ಹೇಳಾ" ಎಂದು ಪ್ರಭುದೇವರನ್ನು ಬೇಡುತ್ತಾಳೆ. "ಕದಳಿಯ ತಳ ಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ನಡೆಯಲ್ಲಿಗೆ ತಾಯೆ" ಎಂದು ಪ್ರಭುದೇವರು ನುಡಿಯುತ್ತಾರೆ. ಚಿಕ್ಕಂದಿನಲ್ಲಿ ಅಕ್ಕ ತನ್ನ ಗುರುಗಳಿಂದ ಕೇಳಿ ತಿಳಿದುಕೊಂಡಿದ್ದ ಶ್ರೀಶೈಲದ ಕದಳಿವನದ ಕಡೆಗೆ ಮುಖ ಮಾಡುತ್ತಾಳೆ. "ನಿಮ್ಮಡಿಗೆ ಹೂವ ತಹೆನಲ್ಲದೆ ಹುಲ್ಲು ತಾರೆನು"ಎಂದು ಶರಣ ಸಂಕುಲವನ್ನು ವಂದಿಸುತ್ತಾ ಕಲ್ಯಾಣ ತೊರೆದು ಕದಳಿಯಡೆಗೆ ನಡೆಯುತ್ತಾಳೆ. ದುರ್ಗಮವಾದ ಕದಳಿವನದಲ್ಲಿ ಸೇರಿ ಕದಳಿಯ ಬನದಲ್ಲಿ ಭವಹರನ ಕಂಡು ಜ್ಯೋತಿಯಲ್ಲಿ ಜ್ಯೋತಿ ಬೆರೆತಂತೆ ಚೆನ್ನ ಮಲ್ಲಿಕಾರ್ಜುನನಲ್ಲಿ ಒಂದಾಗುತ್ತಾಳೆ. ಶ್ರೇಷ್ಠ ವಚನಕಾರ್ತಿಯಾದ ಅಕ್ಕನ 354 ವಚನಗಳು ದೊರಕಿವೆ. ವಚನಗಳು ಅಚ್ಚ ಕನ್ನಡದಲ್ಲಿ ರಚಿಸಲ್ಪಟ್ಟು ಕನ್ನಡದ ಮೊದಲ ಕವಿಯಿತ್ರಿಯಾಗಿ ಸಾಹಿತ್ಯ ಲೋಕವನ್ನು ಬೆಳಗಿದ್ದಾಳೆ. ವಚನಗಳಲ್ಲಿ ಲೌಕಿಕ ಬದುಕು ಲೋಕಾನುಭವ, ಆಧ್ಯಾತ್ಮದ ತುಡಿತ ವಿಶೇಷವಾಗಿದೆ. ವಚನಗಳಲ್ಲಿ ಪ್ರಾಸ ಅಲಂಕಾರಗಳು ಉಪಮೆಗಳು ಓದುಗರ ಮನಮುಟ್ಟುವಂತಿವೆ.

### ಅಕ್ಕನ ಯೋಗಾಂಗ ತ್ರಿವಿಧಿ

ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ ಅರವತ್ತೇಳು ಪದ್ಯಗಳಿಂದ ಕೂಡಿದ ಚಿಕ್ಕ ಕಾವ್ಯ. ಯೋಗ ಎನ್ನುವುದು ಆಧ್ಯಾತ್ಮಿಕ ಪರಿಭಾಷೆಯಲ್ಲಿ ತುಂಬಾ ಬೆಲೆಯುಳ್ಳ ಪದ. ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ ಜೀವನದಲ್ಲಿ ಭಕ್ತಿ ಬೀಜವ ಬಿತ್ತಿ ತ್ಯಾಗ, ಭೋಗ ಮತ್ತು ಯೋಗಾಂಗಗಳಲ್ಲಿ ಲಿಂಗ ತ್ರಯಗಳನ್ನು ಸ್ಥಾಪಿಸಿ ಆಧ್ಯಾತ್ಮ ಸಾಧನೆಯನ್ನು ಜಾಗೃತಗೊಳಿಸುವ ಪರಿಯನ್ನು ತಿಳಿಸುತ್ತದೆ. ಸರಳ ಅರ್ಥದಲ್ಲಿ ಅಕ್ಕಮಹಾದೇವಿ ಲಿಂಗಾಂಗ ಸಾಮರಸ್ಯದ ಸುಖಕ್ಕಾಗಿ ನಡೆಸಿದ ಆಧ್ಯಾತ್ಮ ಹೋರಾಟದ ವೀರಗಾಥೆ ಈ ಯೋಗಾಂಗ ತ್ರಿವಿಧಿ. ಅಕ್ಕಮಹಾದೇವಿಯ ಈ ಕೃತಿ ಅನುಭಾವ ಕಾವ್ಯ ಪರಂಪರೆಗೆ ನೀಡಿದ ಅಮೂಲ್ಯ ಕೊಡುಗೆಯಾಗಿದೆ.

### ಕನ್ನಡದ ಕವಿಗಳು ಕಂಡಂತೆ ಅಕ್ಕ

ಮಹಾದೇವಿಯಕ್ಕನನ್ನು ಕುರಿತ ಮೊಟ್ಟಮೊದಲ ಕೃತಿ ಹರಿಹರನ "ಮಹಾದೇವಿಯಕ್ಕನ ರಗಳೆ"ಹರಿಹರ 12ನೇ ಶತಮಾನದ ವಚನಕಾರರಿಗೆ ಹೆಚ್ಚು ಹತ್ತಿರದಲ್ಲಿ ಬದುಕಿದವನು. 15 ನೇ ಶತಮಾನದ ಚಾಮರಸನ ಪ್ರಭುಲಿಂಗ ಲೀಲೆ, ಇನ್ನು ಆಧುನಿಕ ಕಾಲಕ್ಕೆ ಬಂದರೆ ಜಗದ್ಗುರು ಚೆನ್ನಬಸವರಾಜ ದೇಶ ಕೇಂದ್ರ ನಿಡುಮಾಮಿಡಿ ಶ್ರೀಗಳು ಬರೆದ "ಅಕ್ಕನ ಬಾಳು ಮತ್ತು ಮಾದೇವಿ" ನಂತರ ಡಾ. ಹೆಚ್ ತಿಪ್ಪೇರುದ್ರಸ್ವಾಮಿಯವರ ಕದಳಿಯ ಕರ್ಪೂರ, ಮಾತೆ ಮಹಾದೇವಿಯವರ ತರಂಗಿಣಿ ಪ್ರಮುಖವಾಗಿವೆ. ಮಹಾದೇವಿ ಅಕ್ಕನನ್ನು ಕೇಂದ್ರವಾಗಿಟ್ಟುಕೊಂಡು ಅನೇಕ ಕಾದಂಬರಿಗಳು ಹೊರಬಂದಿವೆ. ಹಾಗೆಯೇ ಬಿ. ಪುಟ್ಟಸ್ವಾಮಯ್ಯನವರ ಅಕ್ಕಮಹಾದೇವಿ ಕೃತಿ ಹಾಗೂ ಬಸವರಾಜ ಕಟ್ಟಿಮನಿಯವರ ಗಿರಿಯನವಿಲು ಕೃತಿಗಳು ಪ್ರಮುಖವಾಗಿವೆ. ಪ್ರಸ್ತುತ ವಿಶ್ವವಿದ್ಯಾಲ ಯಗಳಲ್ಲಿ ಪಿ ಹೆಚ್ ಡಿ ಪ್ರಬಂಧದ ವಿಷಯವಾಗಿ ಮಹಾದೇವಿಯಕ್ಕನ ಕುರಿತು ಪ್ರಬಂಧಗಳು ಹೊರಬಂದಿವೆ. ಆಧ್ಯಾತ್ಮ ಸಾಗರದ ಅನರ್ಘ್ಯ ರತ್ನ ಅಕ್ಕಮಹಾದೇವಿ. ಕನ್ನಡ ನಾಡಿಗೆ ಮಾತ್ರವಲ್ಲ ಇಡೀ ಜಗತ್ತಿನ ಮಹಿಳಾ ಸಾಧಕರಲ್ಲಿಯೇ ಅಗ್ರಗಣ್ಯಗಳು. ಅಕ್ಕನ ಜೀವನ ಚರಿತ್ರೆ ಇಡೀ ಮಹಿಳಾ ಕುಲಕ್ಕೆ ಮಹಾಮೆರುಗು. ಎಂದೆಂದಿಗೂ ಮಹಾದೇವಿಯಕ್ಕ ಕರುನಾಡಿನ ಅಧ್ಯಾತ್ಮದ ಸೌಗಂಧವನ್ನು ಸೂಸುತ್ತಾ ಸ್ತ್ರೀ ಕುಲವನ್ನು ಬೆಳಗುವ ದಿವ್ಯಜ್ಯೋತಿಗೆ ಭಕ್ತಿ ಪೂರ್ವಕ ಶರಣು ಶರಣಾರ್ಥಿಗಳು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

**ನಮ್ಮ ಸಂವಿಧಾನ ಜಾರಿಯಾದಂದಿನಿಂದ 10 ವರ್ಷಗಳವರೆಗೆ ಮೀಸಲಾತಿಯನ್ನು ನೀಡಬೇಕೆಂದು ಅಂಬೇಡ್ಕರ್ ತಿಳಿಸಿದ್ದರು. ಆದರೆ ಇಂದಿನವರೆಗೂ ಸಹ ಮೀಸಲಾತಿ ಮುಂದುವರೆಯುತ್ತಲೇ ಬಂದಿದೆ. ಇದಕ್ಕೆ ಕಾರಣ ನಿರೀಕ್ಷಿತ ಮಟ್ಟದಲ್ಲಿ ಶೋಷಿತ, ದಲಿತ ಹಿಂದುಳಿದ ವರ್ಗಗಳ ಕಲ್ಯಾಣ ಆಗದೇ ಇರುವುದು. ಹಾಗಾಗಿ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ಹೊಂದಲು, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಸಶಕ್ತರಾಗಲು ಆ ವರ್ಗಗಳ ಜನರಿಗೆ ಮೀಸಲಾತಿಯನ್ನು ನೀಡಲಾಗುತ್ತಿದೆ ಹಾಗೂ ಈ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬರಲಾಗಿದೆ.....**

# ಬಾಬಾ ಸಾಹೇಬ್ ಅಂಬೇಡ್ಕರ್ - ಮೀಸಲಾತಿಯ ಅಗತ್ಯತೆ

ಸಂವಿಧಾನ ಎಂದ ಕೂಡಲೇ ನಮಗೆ ನೆನಪಾಗುವ ಮಹಾನ್ ಚೇತನ–ಡಾ. ಬಿ. ಆರ್ ಅಂಬೇಡ್ಕರ್. ಶತ ಶತಮಾನಗಳಿಂದ ಶೋಷಣೆಗೊಳಗಾದ ಭಾರತೀಯ ಸಮಾಜದ ಶೋಷಿತ ವರ್ಗಕ್ಕೆ ಆಶಾಕಿರಣವಾಗಿ ಬಂದವರು ಈ ದಲಿತ ಸೂರ್ಯ. ತಮ್ಮ ಅದ್ಭುತವಾದ ಪಾಂಡಿತ್ಯ ಹಾಗೂ ಕೆಚ್ಚೆದೆಯ ಹೋರಾಟದ ಮನೋಭಾವನೆ ಹಾಗೂ ಮಾನವೀಯ ಮೌಲ್ಯಗಳ ವ್ಯಕ್ತಿತ್ವದ ಮೂಲಕ ಸಂವಿಧಾನ ಶಿಲ್ಪಿಯಾಗಿ, ನವೋದಯದ ಸಮಾನತೆಯ ಹರಿಕಾರರಾಗಿ, ಶಿಕ್ಷಣ ಪ್ರೇಮಿ, ಆರ್ಥಿಕ ತಜ್ಞರಾಗಿ, ಮಾನವೀಯತೆಯ ಸಾಕಾರ ಮೂರ್ತಿಯಾಗಿ ವಿಶ್ವಕ್ಕೆ ಬಾಬಾ ಸಾಹೇಬ ಅಂಬೇಡ್ಕರ್ ರ ಕೊಡುಗೆ ಅನನ್ಯವಾದುದು. ಮಹಿಳೆಯರ,ಶೋಷಿತ ದಲಿತ,ದುರ್ಬಲ ಹಿಂದುಳಿದ ವರ್ಗಗಳ ಏಳ್ಗೆಗಾಗಿ ಅವಿರತ ಶ್ರಮಿಸಿ, ಸಮ ಸಮಾಜದ ನಿರ್ಮಾಣಕ್ಕೆ ಅಡಿಪಾಯ ಹಾಕಿದ ಬಾಬಾ ಸಾಹೇಬರು ಪ್ರಾತಃಸ್ಮರಣೀಯರು.

ಬಾಲ್ಯದಲ್ಲಿ ತಮ್ಮ ಜಾತಿಯ ಕಾರಣಕ್ಕಾಗಿ ನಿಕೃಷ್ಟರೆನಿಸಿ ಹಲವು ರೀತಿಯ ಅವಮಾನ, ಶೋಷಣೆಗೆ ಒಳಗಾಗಿ ನೋವನ್ನು ಅನುಭವಿಸಿದ ಅಂಬೇಡ್ಕರ್ ಛಲ ಬಿಡದೇ ಓದಿ,ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿ ಬ್ಯಾರಿಷ್ಟರ್ ಪದವಿ ಪಡೆದು ಸ್ವದೇಶಕ್ಕೆ ಹಿಂದಿರುಗಿದ ಮೇಲೂ ಅದೇ ಜಾತಿಯ ಕಾರಣಕ್ಕಾಗಿ ಅವಮಾನ ಎದುರಿಸಿದ್ದು ದುರದೃಷ್ಟಕರ. ಜಾತಿ ವ್ಯವಸ್ಥೆ ಪ್ರಬಲವಾಗಿದ್ದ ಕಾಲಘಟ್ಟದಲ್ಲಿ,ತಲ ತಲಾಂತರಗಳಿಂದಲೂ ಸಾಮಾಜಿಕ ವಾಗಿ, ಆರ್ಥಿಕವಾಗಿ,ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದ ಶೋಷಿತ ಸಮುದಾಯದ ಜನರಲ್ಲಿ ಆತ್ಮ ಗೌರವವನ್ನು ಬಡಿದೆಬ್ಬಿಸಿ, ಶಿಕ್ಷಣ –ಸಂಘಟನೆ–ಹೋರಾಟದ ಅಸ್ತ್ರಗಳನ್ನು ನೀಡಿ ದಲಿತರ ಉದ್ಧಾರಕ್ಕೆ ಪಣ ತೊಟ್ಟ ರೀತಿ ವಿಶಿಷ್ಟವಾದದ್ದು, ಪ್ರೇರಣಾದಾಯಿಯಾದದ್ದು.

ಅಂದಿನ ಸಮಾಜದಲ್ಲಿ ಶೋಷಣೆಗೊಳಗಾದ ದಮನಿತರ, ದಲಿತರ ನೋವು, ಅವಮಾನ,ಹಿಂಸೆಗಳನ್ನು ಕಣ್ಣಾರೆ ಕಂಡು ಸ್ವತಃ ತಾವೇ ಅನುಭವಿಸಿ,ಬೆಳೆದು ಆ ಎಲ್ಲ ಶೋಷಣೆಗೆ ಪರಿಹಾರ ನೀಡುವ ರೀತಿಯಲ್ಲಿ ಶ್ರೇಷ್ಟ ಸಂವಿಧಾನವನ್ನು ಬಾಬಾ ಸಾಹೇಬ್ ಅಂಬೇಡ್ಕರ್ ರು ರೂಪಿಸಿದ್ದು ಈಗ ಇತಿಹಾಸ.


ನಮ್ಮ ದೇಶಕ್ಕೆ ಸೂಕ್ತವಾದ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸುವ, ಎಲ್ಲ ವರ್ಗದ ಜನರಿಗೆ ಜಾತ್ಯತೀತವಾಗಿ ನ್ಯಾಯ ಸಮ್ಮತ ಹಕ್ಕು ಅವಕಾಶಗಳನ್ನು ಪಡೆಯಲು ನೆರವಾಗುವ ಬೃಹತ್ ಸಂವಿಧಾನವನ್ನು ರೂಪಿಸಿದ ಡಾ.ಬಿ.ಆರ್ ಅಂಬೇಡ್ಕರ್‌ರ ವಿಚಾರಧಾರೆಗಳು ಸಮಕಾಲೀನ ಭಾರತೀಯ ಸಮಾಜಕ್ಕೆ ಅತ್ಯಂತ ಪ್ರಸ್ತುತ ವೆನಿಸುವಂತಹವು ಎಂದರೆ ಅತಿಶಯೋಕ್ತಿಯಾಗಲಾರದು. ಸಮತೆ ಹಾಗೂ ಸಮಾನತೆಗಳ ಆಧಾರದಲ್ಲಿ ದಲಿತ,ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಮೀಸಲಾತಿ ಯನ್ನು ಜಾರಿಗೆ ತಂದದ್ದರ ಹಿಂದೆ ಬಾಬಾ ಸಾಹೇಬರ ದೂರದರ್ಶಿತ್ವವಿದೆ. ಮೀಸಲಾತಿಯ ಆಧಾರದಲ್ಲಿ ಎಲ್ಲ ವರ್ಗಗಳ ಜನರಿಗೆ ಇಂದು ಅವಕಾಶಗಳು ಲಭ್ಯವಾಗುತ್ತಿರುವುದು ಎಲ್ಲರಿಗೂ ವೇದ್ಯ ಸಂಗತಿ, ಈ ಮೂಲಕ ಸಮಾಜದಲ್ಲಿ ಬೇರೂರಿರುವ ಎಲ್ಲ ರೀತಿಯ ಅಸಮಾನತೆಯನ್ನು ತೊಡೆದು ಹಾಕಲು, ಅಂತರವನ್ನು ಕಡಿಮೆ ಮಾಡಲು ಸಾಧ್ಯವಾಗುತ್ತಿದೆ ಎನ್ನುವುದು ಗಮನಿಸಬೇಕಾದ ಅಂಶ.


ಮೀಸಲಾತಿ ಎನ್ನುವುದು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದ ಶೋಷಿತ ವರ್ಗಗಳ ಜನರಿಗೆ ಮುಂದುವರೆದ ಜನರಂತೆ ತಮ್ಮ ಬದುಕನ್ನು ರೂಪಿಸಿಕೊಳ್ಳಲು,ಎಲ್ಲರಂತೆ ಘನತೆಯಿಂದ ಬದುಕಲು ಸಂವಿಧಾನದತ್ತವಾಗಿ ರೂಪಿಸಿ,ಒದಗಿಸಲಾದ ಒಂದು ಪರಿಹಾರ. ಭಾರತ ದೇಶದಂತಹ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ, ಎಲ್ಲ ಸ್ತರಗಳಲ್ಲಿ ಸಮಾನ ಅವಕಾಶಗಳನ್ನು ಒದಗಿಸಲು ಮೀಸಲಾತಿ ವರದಾನವಾಗಿ ಪರಿಣಮಿಸಿದೆ.

ಮೀಸಲಾತಿಯ ಅಗತ್ಯವೇನು ಎನ್ನುವ ಪ್ರಶ್ನೆಗೆ ನಾವು ಉತ್ತರ ಕಂಡುಕೊಳ್ಳೋಣ. ಇದಕ್ಕೆ ಪೂರಕವಾಗಿ ನಾವು ಸಮಾನತೆ (Equaliity) ಹಾಗೂ ಸಮತೆ (Equity) ಯ ಬಗ್ಗೆ ತಿಳಿದುಕೊಳ್ಳುವುದು ಅವಶ್ಯವಾಗಿದೆ.

ಸಮಾನತೆ ಎಂದರೆ – ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರಿಗೂ ಸರಿ ಸಮನಾಗಿ ಲಭ್ಯವಾಗುವ ಅಥವಾ ದೊರೆಯುವ ಸಂಪನ್ಮೂಲಗಳು, ಅವಕಾಶಗಳು, ಹಾಗೂ ಸ್ಥಾನಮಾನಗಳು ಎಂದು ಅರ್ಥೈಸಬಹುದು. ಹಾಗೆಯೇ ಇನ್ನೊಂದು ಮುಖ್ಯ ಪದ ಸಮತೆ – ಎಂದರೆ ವೈಯಕ್ತಿಕ ಭಿನ್ನತೆ / ಸಾಮರ್ಥ್ಯಕ್ಕೆ ಅನುಗುಣವಾಗಿ, ಸಮಾನವಾಗಿ ದೊರಯುವ ಅವಕಾಶ, ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಪ್ರಗತಿ ಹೊಂದಲು ನೀಡುವ ವಿಶೇಷ, ಪರಿಹಾರತ್ಮಕ ಬೆಂಬಲ ಎಂದು ಅರ್ಥೈಸಬಹುದು. ಸಮಾನತೆ ಹಾಗೂ ಸಮತೆ ಒಂದೇ ಎನಿಸಿದರೂ ಇವರೆಡು ಸಂಪೂರ್ಣ ಭಿನ್ನವಾದವುಗಳಾಗಿವೆ. ಸಮಾನತೆ ಹಾಗೂ ಸಮತೆಗೆ ಸಂಬಂಧಿಸಿದ ಕೆಲವು ಉದಾಹರಣೆಗಳ ಮೂಲಕ ಅವುಗಳ ನಡುವಿನ ವ್ಯತ್ಯಾಸವನ್ನು ನಾವು ತಿಳಿಯಬಹುದು.

ಈ ಮೇಲಿನ ಚಿತ್ರವನ್ನು ಗಮನಿಸಿದಾಗ ಮೊದಲನೇ ಭಾಗದಲ್ಲಿ 3 ಜನ ವ್ಯಕ್ತಿಗಳಿಗೆ ಒಂದು ಕ್ರಿಕೆಟ್ ಪಂದ್ಯವನ್ನು ವೀಕ್ಷಿಸಲು ಸಮಾನ ಅವಕಾಶ ಕಲ್ಪಿಸಲಾಗಿದೆ ಅಂದರೆ ಕ್ರೀಡಾಂಗಣದ ಗೋಡೆಯ ಹೊರಗಡೆ ನಿಂತು ಪಂದ್ಯ ವೀಕ್ಷಿಸಲು ಒಂದೇ ರೀತಿಯ ಸ್ಟೂಲ್ಗಳನ್ನು ಒದಗಿಸಲಾಗಿದೆ ಆದರೆ 3 ಜನ ವ್ಯಕ್ತಿಗಳ ಎತ್ತರ ಬೇರೆ ಬೇರೆಯಾಗಿದೆ, ವೈಯಕ್ತಿಕ ಭಿನ್ನತೆ ಇದೆ. ಆದ್ದರಿಂದ ಕಡಿಮೆ ಎತ್ತರದ 3 ನೇ ವ್ಯಕ್ತಿಗೆ ಪಂದ್ಯವನ್ನು ವೀಕ್ಷಣೆ ಮಾಡಲು ಸಾಧ್ಯವಾಗುವುದಿಲ್ಲ ಅವನು ಪಂದ್ಯ ವೀಕ್ಷಣೆಯಿಂದ ವಂಚಿತನಾಗುತ್ತಾನೆ ಎನ್ನುವುದು ನಮಗೆ ತಿಳಿಯುತ್ತದೆ. ಇದಕ್ಕೆ ಪರಿಹಾರವಾಗಿ ಚಿತ್ರದ ಎರೆಡನೇ ಭಾಗದಲ್ಲಿ 3 ಜನ ವ್ಯಕ್ತಿಗಳ ಎತ್ತರವನ್ನು ಸಮನಾಗಿಸಲು 1 ನೇ ವ್ಯಕ್ತಿಯ ಸ್ಟೂಲ್ ನ್ನು ತೆಗೆದು, ಪಂದ್ಯ ವೀಕ್ಷಣೆಯಿಂದ ವಂಚಿತನಾದ 3 ನೇ ವ್ಯಕ್ತಿಗೆ ನೀಡಲಾಗಿದೆ. ಇದರಿಂದ






3 ನೇ ವ್ಯಕ್ತಿಗೆ ಈಗ ಪಂದ್ಯ ನೋಡಲು ಸಾಧ್ಯವಾಯಿತು.ಹೀಗೆ ಸಮಾನ ಅವಕಾಶ ಕಲ್ಪಿಸಿದಾಗ್ಯೂ ಅಭಿವೃದ್ಧಿ ಹೊಂದಲು ಸಾಧ್ಯವಾಗದ ವರ್ಗಕ್ಕೆ ಪ್ರಗತಿ ಹೊಂದಲು ನ್ಯಾಯೋಚಿತ ವಾಗಿ ನೀಡುವ ವಿಶೇಷ ಬೆಂಬಲವನ್ನೇ ಸಮತೆ ಎಂದು ಕರೆಯಲಾಗುತ್ತದೆ.

ನಮ್ಮ ಸಂವಿಧಾನವು ನಮಗೆ ಎಲ್ಲ ಕ್ಷೇತ್ರಗಳಲ್ಲಿ ಸಮಾನ ಹಕ್ಕು ಅವಕಾಶಗಳನ್ನು ಕಲ್ಪಿಸಿದೆ ಆದರೂ ಸಹ ಎಲ್ಲ ವರ್ಗದ ಜನರ ಕಲ್ಯಾಣ ಒಂದೇ ರೀತಿಯಾಗಿಲ್ಲ.ನಮ್ಮ ದೇಶ ಸ್ವತಂತ್ರವಾದಾಗಿನಿಂದ ಇಂದಿನವರೆಗೂ ಹಲವು ರೀತಿಯ ಯೋಜನೆ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತಂದರೂ ಸಹ ದಲಿತ, ಹಿಂದುಳಿದ ವರ್ಗಗಳ ಬಹುತೇಕ ಜನರ ಬದುಕಿನ ಗುಣಮಟ್ಟವನ್ನು ಎತ್ತರಿಸಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಹಿಂದುಳಿದ ಎಲ್ಲ ಜನರಿಗೆ ಅಭಿವೃದ್ಧಿ ಹೊಂದಲು ಸಮತೆಯನ್ನು ಹೊಂದಲು ಮೀಸಲಾತಿಯ ಅಗತ್ಯವಿದೆ ಎಂದು ಹೇಳಬಹುದು.

ನಮ್ಮ ಸಂವಿಧಾನ ಜಾರಿಯಾದಂದಿನಿಂದ 10 ವರ್ಷಗಳವರೆಗೆ ಮೀಸಲಾತಿಯನ್ನು ನೀಡಬೇಕೆಂದು ಅಂಬೇಡ್ಕರ್ ತಿಳಿಸಿದ್ದರು. ಆದರೆ ಇಂದಿನವರೆಗೂ ಸಹ ಮೀಸಲಾತಿ ಮುಂದುವರೆಯುತ್ತಲೇ ಬಂದಿದೆ. ಇದಕ್ಕೆ ಕಾರಣ ನಿರೀಕ್ಷಿತ ಮಟ್ಟದಲ್ಲಿ ಶೋಷಿತ, ದಲಿತ ಹಿಂದುಳಿದ ವರ್ಗಗಳ ಕಲ್ಯಾಣ ಆಗದೇ ಇರುವುದು. ಹಾಗಾಗಿ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ಹೊಂದಲು, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಸಶಕ್ತರಾಗಲು ಆ ವರ್ಗಗಳ ಜನರಿಗೆ ಮೀಸಲಾತಿಯನ್ನು ನೀಡಲಾಗುತ್ತಿದೆ ಹಾಗೂ ಈ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬರಲಾಗಿದೆ. ಸಮಾಜದಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ ಮುಂದುವರೆದಿರುವ ಪ್ರಗತಿ ಹೊಂದಿರುವ ಮೇಲ್ವರ್ಗದ ಸಮುದಾಯಗಳು ಮೀಸಲಾತಿ ವ್ಯವಸ್ಥೆ ವಿರುದ್ಧ ಅಸಮಾಧಾನ ತೋರಿದರೂ, ಕೆಳ ವರ್ಗದ ಜನರ ಅಭ್ಯುದಯಕ್ಕಾಗಿ ಮೀಸಲಾತಿ ಅತ್ಯಗತ್ಯ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಹಾಗೆಯೇ ಇತ್ತೀಚಿನ ವರ್ಷಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದ ಜನರಿಗೂ (EWS) ಶೇ 10 ರಷ್ಟು ಮೀಸಲಾತಿಯನ್ನು ಸಂವಿಧಾನ ತಿದ್ದುಪಡಿಯ ಮೂಲಕ ಕಲ್ಪಿಸಲಾಗಿದೆ. ಸಮಾಜದ ಎಲ್ಲ ವರ್ಗಗಳ ಶ್ರೇಯೋಭಿವೃದ್ಧಿಗೆ ಮೀಸಲಾತಿ ಸಹಾಯಕವಾಗಿದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಇದನ್ನು ಯಾರೂ ಮರೆಯಬಾರದು.

ಸಂವಿಧಾನ ಪ್ರದತ್ತವಾದ ವರ್ಗವಾರು ಮೀಸಲಾತಿಯು, ಯಾವ ಉದ್ದೇಶಕ್ಕಾಗಿ ಶೋಷಿತ ಸಮುದಾಯಗಳಿಗೆ ನೀಡಲ್ಪಟ್ಟಿದೆಯೋ ಆ ಉದ್ದೇಶ ಈಡೇರಿಕೆಯಾದಾಗ ಸಹಜವಾಗಿ ಮೀಸಲಾತಿ ಕೊನೆಗೊಳ್ಳುತ್ತದೆ ಈ ನಿಟ್ಟಿನಲ್ಲಿ ಉತ್ತಮ ಸ್ಥಿತಿಯಲ್ಲಿರುವ ಮೇಲ್ವರ್ಗದ ಜನರು ಮೀಸಲಾತಿ ಅಗತ್ಯತೆಯನ್ನು ಅರ್ಥ ಮಾಡಿಕೊಳ್ಳ ಬೇಕಾದದ್ದು ಅಪೇಕ್ಷಣೀಯ ಹಾಗೂ ತುರ್ತು ಅಗತ್ಯಗಳ ಲ್ಲೊಂದು ಎಂದು ಹೇಳಬಹುದು.

■ **ಜಿ. ಜಗದೀಶ** ಶಿಕ್ಷಕರು. ಶಿವಪುರ.


# ಸ್ತ್ರೀ ಕುಲದ ಆರಾಧ್ಯ ದೇವ ಡಾ.ಬಾಬಾ ಸಾಹೇಬ್ ಅಂಬೇಡ್ಕರ್

ಒಂದು ದೇಶದ ಪ್ರಗತಿಯನ್ನು, ಆ ದೇಶದಲ್ಲಿರುವ ಮಹಿಳೆಯರ ಸಾಮರ್ಥ್ಯ ಹಾಗೂ ಅವರ ಪ್ರಗತಿಯ ಮೇಲೆ ಅಳೆಯುತ್ತೇನೆ" ಎನ್ನುವ ಮಾತು ಹೇಳಿದ ಏಕೈಕ ವ್ಯಕ್ತಿ ಅದು ಡಾ.ಬಾಬಾ ಸಾಹೇಬ್ ಅಂಬೇಡ್ಕರ್.

ಪ್ರಕೃತಿಯು ತೋರದ ವ್ಯತ್ಸಾಸ ಭೇದ ಭಾವವನ್ನು ಪುರುಷ ವರ್ಗ ಮಾಡಿತ್ತಿದ್ದ ಹೆಣ್ಣು ಗಂಡು ಎಂಬ ಭೇದ ಭಾವ ಹಾಗೂ ತಾರತಮ್ಯಕ್ಕೆ ತೆರೆ ಎಳೆದು ಕಾಲಾಂತರಗಳಿಂದ ನಡೆದು ಬಂದ ದುಷ್ಟ ಪದ್ಧತಿಯ ಮೇಲೆ ತೆರೆ ಎಳೆದವರು ಡಾ.ಬಾಬಾ ಸಾಹೇಬ್ ಅಂಬೇಡ್ಕರ್.

ಭಕ್ತಿ ಚಳುವಳಿಯ ಕಾಲದಿಂದಲೂ ಸಾಮಾಜಿಕ ಸ್ಥಾನಮಾನಗಳಲ್ಲಿ ಅವಕಾಶ ಕೆಳಕ್ಕೂ ಧ್ವನಿ ಎತ್ತದ ಹೆಣ್ಣಿನ ಜೀವನದಲ್ಲಿ ಯಾವ ಬದಲಾವಣೆಯೂ ಕಾಣಲು ಸಾಧ್ಯವಾಗಿರಲಿಲ್ಲ.

ಆದಿ ಅನಾದಿ ಕಾಲದಿಂದಲೂ ಒಂದೊ ಎರಡೊ ಹೆಣ್ಣು ಮಕ್ಕಳು ಧ್ವನಿ ಎತ್ತಲೂ ಪ್ರಯತ್ನಿಸಿದರು, ಅವರ ಹೋರಾಟಕ್ಕೆ ಬೆಂಬಲದ ಬರವಿತ್ತು. ಹೆಣ್ಣು ಅಡುಗೆ ಮನೆಗೆ ಸೀಮಿತ, ಮಕ್ಕಳು ಹೆತ್ತುವ ಯಂತ್ರ, ಭೋಗದ ವಸ್ತು.... ಎನ್ನುವ ಭಾವನೆ ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿತು. ಬಾಲ್ಯ ವಿವಾಹ, ಸತಿ ಸಹಗಮನ ಪದ್ಧತಿ, ದೇವಸ್ಥಾನಗಳಲ್ಲಿ, ಶಾಲೆಗಳಲ್ಲಿ ಪ್ರವೇಶ ನಿರ್ಬಂಧ, ಅದರಲ್ಲಿಯೂ ದಲಿತ ಮಹಿಯರ ಸ್ಥಿತಿ ಚಿಂತಾಜನಕವಾಗಿತ್ತು. ಕೈಯಲ್ಲಿ ಬಳೆ ಹಾಕುವಂತಿಲ್ಲ, ಯಾವುದೇ ರೀತಿಯ ಆಭರಣ ಅದರಲ್ಲಿ ಚಿನ್ನದ ಆಭರಣ ಹಾಕುವ ಹಾಗಿರಲಿಲ್ಲ, ಹೂವು ಮೂಡಿಸಿಕೊಳ್ಳೋ ಹಾಗೂ ಇರಲಿಲ್ಲ, ಹಣೆ ಮೇಲೆ ಕುಂಕುಮ ಇಟ್ಟುಕೊಳ್ಳುವ ಹಾಗೆ ಇರಲಿಲ್ಲ, ಮೊಳಕಾಲ ಮೇಲೆ ಸೀರೆ ಉಟ್ಟಿಕೊಳ್ಳಬೇಕು, ದಲಿತರ ಮೊದಲ ಹೆಣ್ಣು ಮಗು ದೇವದಾಸಿ ಆಗಬೇಕು, ದಲಿತರ ಗಂಡು ಮಕ್ಕಳು ಪೊತೆಗಳು ಆಗಬೇಕು. ಯಾವ ದೇವರೂ ಬರೆದಿದ್ದು ಕಣ್ರೀ ದೇವದಾಸಿ ಪದ್ಧತಿಗೆ ಸಿಲುಕಿದ ಆ ಮುಗ್ಧ ಮಕ್ಕಳ ಮೇಲೆ, ಹೆಣ್ಣಿನ ಮೇಲೆ ಹಗಲಿರುಳು ನೆಡೆಯುವ ಅತ್ಯಾಚಾರದ ಭಯಾನಕ ದಿನಗಳು, ವಿಧವೆಯರ ಸ್ಥಿತಿ ತೀರಾ ಚಿಂತಾಜನಕ ಆಗಿತ್ತು. ಮನೆಯ ಪ್ರತಿಯೊಬ್ಬ ಪುರುಷ ತನ್ನ ಮನಸ್ಸೋ ಇಷ್ಟೆಯಂತ್ತೆ ಭೋಗದ ವಸ್ತುವನ್ನಾಗಿ ಬಳಸುತ್ತಿದ್ದರು. ಓದುವ ಹಕ್ಕಿಲ್ಲ, ಕುಣಿದು ಕುಪ್ಪಳಿಸುವ ಹಾಕಿಲ್ಲ, ಗಂಡ ತೀರಿಕೊಂಡ ನಂತರ ಅವನ ಚಿತೆಯೊಂದಿಗೆ ಇವಳು ಸಾಯಬೇಕು ಅಬ್ಬಾ ಆದಿ ಅನಾದಿ ಕಾಲದಿಂದಲೂ ನಮ್ಮ ಮಕ್ಕಳ ಈ ಚಿಂತಾಜನಕ ಸ್ಥಿತಿಯ ಬಗ್ಗೆ ಯೋಚಿಸಿದರೆ ಹೆಣ್ಣಾಗಿ ಹುಟ್ಟಲೆ ಬಾರದು ಎಂಬ ಮಾತು ಹೆಣ್ಣು ಮಕ್ಕಳು ದೇವರಲ್ಲಿ ಪ್ರಾರ್ಥಿಸುತ್ತಿದ್ದರು.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Scan For Digital Colourful
HAMPI TIMES E-paper

ಒಟ್ಟಾರೆಯಾಗಿ," ನಾ ಸ್ತ್ರೀ ಸ್ವಾತಂತ್ರ್ಯಂ" ಎನ್ನುವ ಮನೋವಾದಿಗಳ ಮಾತಿಗೆ ತೆರೆ ಎಳೆದು "ಯತ್ರ ನಾರೆಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಹಾ" ಎಬ್ಬಾ ಮಾತನ್ನು ಜಗತ್ತಿಗೆ ತೋರಿಸಿಕೊಟ್ಟವರು ಡಾಕ್ಟರ್ ಬಾಬಾ ಸಾಹೇಬರು.

ತಮ್ಮ ಜಾತಿವಿನಾಶ ಪ್ರಬಂಧದಲ್ಲಿ ಅಂಬೇಡ್ಕರ್ ಹೇಳಿರುವಂತೆ ಪ್ರಾಚೀನ ಕಾಲದ ಭಾರತೀಯ ಸಮಾಜ ವರ್ಣ,ಜಾತಿಗಳಾಗಿ ಶ್ರೇಣೀಕರಣಗೊಳ್ಳಲು ಪ್ರಾರಂಭಿಸಿದ ದಿನವೇ ಹೆಣ್ಣಿನ ಹಕ್ಕು ಅಧಿಕಾರಗಳು ಮೊಟಕುಗೊಳ್ಳಲೂ ಶುರುವಾದವು. ಜಾತಿಪದ್ಧತಿ ಹುಟ್ಟಿದ್ದು ಹೆಣ್ಣಿನ ಲೈಂಗಿಕತೆಯನ್ನು ಚೌಕಟ್ಟಿಗೊಳಪಡಿಸಿ ನಿರ್ಬಂಧಿಸುವ ಮೂಲಕ. ಜಾತಿಪದ್ಧತಿ ಬೆಳೆದಿದ್ದು ಒಳವಿವಾಹ ಚಾಲ್ತಿಗೆ ತರುವ ಮೂಲಕ. ಜಾತಿಪದ್ಧತಿ ಉಳಿದಿದ್ದು ತನಗೆ ಲಭ್ಯವಿರುವ ಹೆರುವ ಹೆಣ್ಣುಗಳನ್ನು ತನಗೆಂದೇ ಕಾಯ್ದಿಟ್ಟುಕೊಳ್ಳುವ ಮೂಲಕ. ಒಟ್ಟಾರೆ ಜಾತಿ ವ್ಯವಸ್ಥೆಯೆನ್ನುವುದು ಹೆಣ್ಣಿನ ಲೈಂಗಿಕತೆ, ಆಯ್ಕೆಯನ್ನಷ್ಟೆ ನಿರ್ಬಂಧಗೊಳಿಸಲಿಲ್ಲ; ಅವಳನ್ನು ಶಾಶ್ವತವಾಗಿ ನಿರ್ಬಂಧಿತ ಸ್ಥಿತಿಯಲ್ಲಿಡಲು ಅನುಕೂಲವಾಗುವ ಆಚರಣೆ, ರೂಢಿ, ಪರಿಕಲ್ಪನೆಗಳನ್ನು ಜಾರಿ ಮಾಡಿತು. ಜ್ಞಾನ, ಅವಕಾಶ, ಆರ್ಥಿಕ ಸಂಪನ್ಮೂಲ, ಅಧಿಕಾರ ಈ ಎಲ್ಲ ನೆಲೆಗಳಿಂದಲೂ ಹೆಣ್ಣನ್ನು ವಂಚಿಸಿ ಅಂಚಿಗೆ ತಳ್ಳಲಾಯಿತು. ಭಾರತೀಯ ಸಮಾಜದ ಸಾಮಾಜಿಕ, ಆರ್ಥಿಕ ಅಸಮಾನ ರಚನೆಗಳೇ ಲಿಂಗತಾರತಮ್ಯದ ಮೂಲ ಕಾರಣವಾಗಿ ಇವತ್ತಿಗೂ ಮುಂದುವರೆದಿವೆ. 'ಸ್ತ್ರೀವಾದವೆಂಬುದು ಪಾಶ್ಚಾತ್ಯ ಪರಿಕಲ್ಪನೆ. ಭಾರತದಲ್ಲಿ ಲಿಂಗವಿಶಿಷ್ಟ ಜವಾಬ್ದಾರಿಗಳಿವೆ; ಲಿಂಗ ಅನನ್ಯತೆಯ ಕುರುಹಾದ ಆಚರಣೆಗಳಿವೆಯೇ ಹೊರತು ಲಿಂಗತಾರತಮ್ಯ ಇಲ್ಲ ಎನ್ನುವುದು ಮನೋವಾದಿಗಳ ವಾದವಾಗಿತ್ತು.

ಹೆಣ್ಣು ಹಿಂದೂ ಸಮಾಜದ ಅತ್ಯಂತ ಶೋಷಿತಳು. ದಲಿತರು ಮತ್ತು ಮಹಿಳೆಯರ ಸ್ಥಿತಿಗತಿ ಒಂದೇ. ಭಾರತೀಯ ಸಮಾಜ ಒಂದು ಕೈಯಲ್ಲಿ ಅವಳನ್ನು ಪೂಜಿಸುತ್ತ, ಮತ್ತೊಂದು ಕೈಯಲ್ಲಿ ಬೆತ್ತ ಹಿಡಿದು ಲಕ್ಷ್ಮಣರೇಖೆಗಳನ್ನು ದಾಟದಂತೆ ನಿರ್ಬಂಧ ವಿಧಿಸಿದೆ ಎಂಬುದನ್ನು ಅಂಬೇಡ್ಕರ್ ಅರಿತಿದ್ದರು. ವಿದೇಶೀ ವಿದ್ಯಾಭ್ಯಾಸ, ಅದರಲ್ಲೂ ಜರ್ಮನಿಯ ಬಾನ್‌ನಲ್ಲಿ ಕಳೆದ ದಿನಗಳು ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಗೆ ಅವರನ್ನು ಹತ್ತಿರ ತಂದವು. ಮೊದಲ ಅಲೆಯ ಮಹಿಳಾ ಚಳುವಳಿಯ ಪ್ರತಿಫಲವಾಗಿ1918ರ ಹೊತ್ತಿಗೆ ಬ್ರಿಟನ್ ಹಾಗೂ 1920ರ ವೇಳೆಗೆ ಅಮೆರಿಕಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ಕೊಡಲಾಯಿತು.



ಸಮಾನ ವೇತನ, ಮಹಿಳೆಯರಿಗೆ ಸಮಾನ ಆಸ್ತಿ ಹಕ್ಕು ಮೊದಲಾದವು ಅಲ್ಲಿ ಬಹುಚರ್ಚಿತ ವಿಷಯಗಳಾಗಿದ್ದವು. ಸಹಜವಾಗಿಯೇ ಮುಕ್ತ ಚಿಂತನೆಯ ಅಂಬೇಡ್ಕರರನ್ನು ಮಹಿಳಾಪರ ಚಿಂತನೆಗಳು ಸೆಳೆದವು. ರಾಜಕೀಯ ಅಧಿಕಾರ ಸಿಗದೇ ಯಾವುದೂ ಬದಲಾಗುವುದು ಅಷ್ಟು ಸುಲಭವಲ್ಲ ಎಂಬುದನ್ನವರು ಗುರುತಿಸಿದರು. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಓದುವಾಗ ಹಿಂದುಳಿದ ವರ್ಗಗಳ ವಿದ್ಯಾಭ್ಯಾಸ, ಅದರಲ್ಲೂ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಬಹುಮುಖ್ಯವೆಂದು ಅರಿತರು. 'ಸದ್ಯದಲ್ಲಿಯೇ ಒಳ್ಳೆಯ ದಿನಗಳನ್ನು ಕಾಣುತ್ತೇವೆ. ಆದರೆ ಅದಕ್ಕಾಗಿ ಪುರುಷರ ಜೊತೆಗೆ ಮಹಿಳೆಯರೂ ಒಟ್ಟಿಗೆ ಶಿಕ್ಷಣ ಪಡೆಯುವುದು ಅವಶ್ಯವಿದೆ ಎಂದೂ ಹೇಳಿದ್ದರು.

ಅಂತಹ ಸಮಯದಲ್ಲಿ ಸ್ತ್ರೀ ಶಿಕ್ಷಣಕ್ಕಾಗಿ ಹಾಗೂ ಸ್ತ್ರೀ ಸ್ವಾತಂತ್ರ್ಯ ಸಮಾನತೆಗಾಗಿ ಹೋರಾಟ ಮಾಡಿ ಗಟ್ಟಿ ನೆಲೆ ಕಲ್ಪಿಸಿ ಕೊಟ್ಟ ಫುಲೆ ದಂಪತಿಗಳ ಹೋರಾಟವನ್ನು ಬಾಲದಿಂದಲೇ ವೀಕ್ಷಿಸುತ್ತಿರುವ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮಹಿಳೆಯರೇ ಗಾಗಿ ಸಾಮಾಜಿಕ ಆರ್ಥಿಕ ರಾಜಕೀಯವಾಗಿ ಒಂದು ಗಟ್ಟಿ ನೆಲೆಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಕಾನೂನಾತ್ಮಕ ಹೋರಾಟವನ್ನು ಪ್ರಾರಂಭಿಸಿದವರು ಹಿಂದೂ ಕೋಡ ಬಿಲ್ ಸರ್ಕಾರದ ಮುಂದೆ ಇಟ್ಟಾಗ, ಸರ್ಕಾರ ಇದನ್ನು ನಿರಾಕರಿಸಿದ ಸಂದರ್ಭದಲ್ಲಿ ತನ್ನ ಹುದ್ದೆಗೆ ರಾಜೀನಾಮೆ ಕೊಟ್ಟಂತಹ ವ್ಯಕ್ತಿ ಇವರು.

ಮಹಿಳೆಯರು ಎದುರಿಸುವ ಜೈವಿಕ, ದೈಹಿಕ ಕಷ್ಟಗಳ ಕುರಿತು; ನಿಭಾಯಿಸಬೇಕಾದ ವಿಶೇಷ ಜವಾಬ್ದಾರಿಯ ಕುರಿತು ಅಂಬೇಡ್ಕರ್ ಮಾತನಾಡಿದರು. 1938ರಷ್ಟು ಹಿಂದೆಯೇ ಕುಟುಂಬ ಯೋಜನಾ ವಿಧಾನವನ್ನು ಸರ್ಕಾರ ಜನಪ್ರಿಯಗೊಳಿಸಬೇಕೆಂದು ಮುಂಬಯಿಯ ಶಾಸನಸಭೆಯಲ್ಲಿ ವಾದಿಸಿದರು. ಹೆತ್ತುಹೆತ್ತು ಮಕ್ಕಳನ್ನು ಸಾಕುವುದರಲ್ಲೇ ಹೆಣ್ಣುಮಕ್ಕಳು ಹೈರಾಣಾಗುತ್ತಿದ್ದಾರೆಂದೂ, ಅವರ ಶಕ್ತಿಸಾಮರ್ಥ್ಯವನ್ನು ಸಮಾಜ ಉಪಯೋಗಿಸಿಕೊಳ್ಳಬೇಕೆಂದರೆ ಕುಟುಂಬ ಯೋಜನೆ ಅವಶ್ಯವೆಂದೂ ಪ್ರತಿಪಾದಿಸಿದರು.

1942ರಲ್ಲಿ ದೆಹಲಿ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿದ್ದಾಗ ಹೆರಿಗೆ ಭತ್ಯೆ ನೀಡುವ ಬಗ್ಗೆ ಪ್ರಸ್ತಾಪಿಸಿದರು. ವೇತನ ಸಹಿತ ಹೆರಿಗೆ ಭತ್ಯೆ ರಜೆ ನೀಡುವುದು ಸರ್ಕಾರಕ್ಕೆ ಆರ್ಥಿಕ ಹೊರೆಯೆನಿಸಿದರೂ ಸಹ ಮನುಷ್ಯ ಸಮಾಜದ ನಾಳಿನ ಸಂತತಿಯನ್ನು ಹೆತ್ತು ಸಾಕುವ ಹೆಣ್ಣುಮಕ್ಕಳನ್ನು ಅಷ್ಟಾದರೂ ಗೌರವಿಸುವುದು, ಅವರಿಗೆ ಅವಶ್ಯವಿರುವಷ್ಟು ವಿರಾಮ ನೀಡುವುದು ಉಳಿದ ಸಮಾಜದ ಕರ್ತವ್ಯ ಎಂದೂ, ಅದಕ್ಕೆ ಸರ್ಕಾರ ಸಿದ್ಧತೆ ಮಾಡಿಕೊಳ್ಳಬೇಕೆಂದೂ ಸೂಚಿಸಿದರು.

ಹಾಗೆಯೆ ಭಾರತ' ಪತ್ರಿಕೆಗಳಲ್ಲಿ ಮಹಿಳಾ ಸಮಸ್ಯೆ ಮುಖ್ಯವಾಗಿ ಚರ್ಚಿತವಾಗುತ್ತಿತ್ತು. ಮಹಾಡ್ ಸತ್ಯಾಗ್ರಹ ಮೆರವಣಿಗೆಯಲ್ಲಿ 500 ಸ್ತ್ರೀಯರು ಪಾಲ್ಗೊಂಡಿದ್ದರು. ಕಾಳಾರಾಮ್ ದೇವಾಲಯ ಪ್ರವೇಶ ಸಂದರ್ಭದಲ್ಲಿ ಕೂಡಾ ಮಹಿಳೆ ಯರಿದ್ದರು 1927ರಲ್ಲಿ ಡಿಪ್ರೆಸ್ಟ್ ಕ್ಲಾಸ್ ವಿಮೆನ್ಸ್ ಅಸೋಸಿಯೇಷನ್ ಶುರುವಾಯಿತು. ಅದರ ಸಮಾವೇಶ ದಲ್ಲಿ 3000 ಹಿಂದುಳಿದ ಮಹಿಳೆಯ ರನ್ನುದ್ದೇಶಿಸಿ ಮಾತನಾಡುತ್ತಾ 'ನಿಮ್ಮ ಬಟ್ಟೆ ತೇಪೆಯಿಂದ ಕೂಡಿದ್ದರೇನಾಯಿತು? ಸ್ವಚ್ಛವಾಗಿರಿ. ನಿಮ್ಮನ್ನು ನೀವೇ ಮುಟ್ಟಿಸಿಕೊಳ್ಳದವರೆಂದು ಭಾವಿಸಬೇಡಿ. ನಿಮ್ಮ ಮಕ್ಕಳನ್ನು ಅದರಲ್ಲೂ ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸಿ. ಮಕ್ಕಳ ಮನಸ್ಸಿನ ಕೀಳರಿಮೆ ತೆಗೆದು ಅವರಲ್ಲಿ ಆತ್ಮಗೌರವ ತುಂಬಿ. ಮಹಾನ್ ವ್ಯಕ್ತಿಗಳಾಗಲು ಹುಟ್ಟಿದ್ದಾರೆಂದು ಅವರನ್ನು ನಂಬಿಸಿ ಎಂದು ಕಿವಿಮಾತು ಹೇಳಿದ್ದರು. ಅಂಬೇಡ್ಕರರ ತಾತ್ವಿಕ ಬೆಂಬಲ ಹಾಗೂ ಸಂಘಟನೆಗಳ ಬಲದೊಂದಿಗೆ ಮಹಿಳಾ ಜಾಗೃತಿಯ ಹೊಸ ಅಧ್ಯಾಯವೇ ಶುರುವಾಯಿತು.

1928ರಲ್ಲಿ ಹಿಂದುಳಿದ ಮಹಿಳೆಯರ ಸಂಘಟನೆ ಆರಂಭವಾಯಿತು. ಅನೇಕ ಕಡೆಗಳಲ್ಲಿ ದಲಿತ ಮಹಿಳಾ ಸಮಾವೇಶಗಳು ಜರುಗಿದವು. ತುಳಸೀಬಾಯಿ ಬಣಸೋಡೆ 'ಚೊಕ್ಕಮೇಲ' ಎಂಬ ಪತ್ರಿಕೆ ಶುರುಮಾಡಿದರು.

ಮಹಿಳಾ ಹಾಸ್ಟೆಲ್ಲುಗಳು, ಶಾಲೆಗಳನ್ನು ತೆರೆಯಲಾಯಿತು. ಹೆಣ್ಣುಮಕ್ಕಳು ಆತ್ಮಕತೆ, ನಾಟಕಗಳನ್ನು ಬರೆದರು. ಧರ್ಮಪ್ರಸಾರಕರಾದರು. 1931ರಲ್ಲಿ ರಾಧಾಬಾಯಿ ವಢಾಳೆ ಎಂಬಾಕೆ, 'ಹಿಂದೂ ದೇವಸ್ಥಾನ ಪ್ರವೇಶಿಸಲು ಹಾಗೂ ಕುಡಿಯುವ ನೀರಿಗಾಗಿ ಸಾರ್ವಜನಿಕ ಜಲಮೂಲಗಳಿಗೆ ಹೋಗಲು ನಮಗೆ ಹಕ್ಕು ಬೇಕು. ಅಷ್ಟೇ ಅಲ್ಲ ನಾವು ಇನ್ನು ಮುಂದೆ ಹೆದರುವವರಲ್ಲ, ಸಾಮಾಜಿಕ ಹಕ್ಕುಗಳ ಜೊತೆ ನಮಗೆ ರಾಜಕೀಯ ಹಕ್ಕುಗಳೂ ಬೇಕು. ಕಠಿಣ ಶಿಕ್ಷೆಗೆಲ್ಲ ನಾವು ಹೆದರುವವರಲ್ಲ.. ಅವಮಾನಕರವಾಗಿ ಬದುಕುವುದಕ್ಕಿಂತ ನೂರು ಸಲವಾದರೂ ಹೋರಾಡಿ ಸಾಯಲು ನಾವು ಸಿದ್ಧರಿದ್ದೇವೆ ಎಂದು ಹೇಳಿದಳು.

ಮತ್ತೆ 1931ರಲ್ಲಿ ರಾಧಾಬಾಯಿ ವಢಾಳೆ ಎಂಬಾಕೆ, 'ಹಿಂದೂ ದೇವಸ್ಥಾನ ಪ್ರವೇಶಿಸಲು ಹಾಗೂ ಕುಡಿಯುವ ನೀರಿಗಾಗಿ ಸಾರ್ವಜನಿಕ ಜಲಮೂಲಗಳಿಗೆ ಹೋಗಲು ನಮಗೆ ಹಕ್ಕು ಬೇಕು. ಸಾಮಾಜಿಕ ಹಕ್ಕುಗಳ ಜೊತೆ ನಮಗೆ ರಾಜಕೀಯ ಹಕ್ಕುಗಳೂ ಬೇಕು ಎಂದು ಬ್ರಿಟಿಷರಿಗೂ ಹಾಗೂ ಭಾರತೀಯ ನಾಯಕರಿಗೂ ಎಚ್ಚರಿಕೆ ನೀಡಿದಳು, ಕಠಿಣ ಶಿಕ್ಷೆಗೆಲ್ಲ ನಾವು ಹೆದರುವವರಲ್ಲ. ಅವಮಾನಕರವಾಗಿ ಬದುಕುವುದಕ್ಕಿಂತ ನೂರು ಸಲವಾದರೂ ಹೋರಾಡಿ ಸಾಯಲು ನಾವು ಸಿದ್ಧರಿದ್ದೇವೆ ಎಂದು ಹೇಳಿದಳು.

ಹೀಗೆ ಅನೇಕ ಕಡೆಗಳಲ್ಲಿ ನಿಧಾನವಾಗಿ ಗತಿಯಲ್ಲಿ ಮಹಿಳೆಯರ ತನ್ನ ಹಕ್ಕುಗಳಿಗೆ ಹೋರಾಟ ಪ್ರಾರಂಭ ಮಾಡುವ ನಿಟ್ಟಿನಲ್ಲಿ ದೇಶಾದ್ಯಂತ ಹೋರಾಟಗಳು ಪ್ರಾರಂಭವಾದವು. ಯಾವುದೇ ಕಾರಣಕ್ಕೂ ಯಾವುದೆ ಆಸೆ ಆಮಿಷಕ್ಕೆ ಅಧಿಕಾರಕ್ಕೆ ಬಲಿ ಬೀಳದೆ ಸಂವಿಧಾಮಾತ್ಮಕವಾಗಿ ಹೆಣ್ಣು ಮಕ್ಕಳಿಗೆ ಎಲ್ಲಾ ಕ್ಷೇತ್ರಗಳಲ್ಲಿ ಹಕ್ಕು ಒದಗಿಸಿಕೊಡುವಲ್ಲಿ ಬಾಬಾ ಸಾಹೇಬ್ ಅವರು ಅನೇಕ ಕೊಡುಗೆಗಳನ್ನು ನೀಡಿದರು

ಒಂದು ಸಭೆಯಲ್ಲಿ ಮಾತನಾಡುತ್ತ, 'ಮದುವೆಗೆ ಅವಸರಪಡಬೇಡಿ. ಮದುವೆ ಒಂದು ಬಂಧನ. ಮದುವೆಯ ನಂತರದ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸುವಷ್ಟು ಶಕ್ತಿಶಾಲಿಯಲ್ಲದಿದ್ದರೆ ಮದುವೆಯಾಗಬೇಡಿ. ಮದುವೆಯಾದ ಹೆಣ್ಣು ಗಂಡನ ಪಕ್ಕ ಸರಿಸಮಾನಳಾಗಿ ನಿಲ್ಲಬೇಕು, ದಾಸಿಯಂತಲ್ಲ. ಮದುವೆಯಾದವರು ನೆನಪಿಡಿ: ತುಂಬ ಮಕ್ಕಳನ್ನು ಹೆರುವುದು ಅಪರಾಧ. ಏಕೆಂದರೆ ನಮ್ಮ ಪಾಲಕರು ನೀಡಿದ್ದಕ್ಕಿಂತ ಹೆಚ್ಚಿನದನ್ನು ನಾವು ನಮ್ಮ ಮಕ್ಕಳಿಗೆ ನೀಡಲು ಶಕ್ತರಾಗಿರಬೇಕು ಎಂದು ಹೇಳಿದರು. ಇಂಥ ತಾಯ್ತನದ ಅಂತಃಕರಣದ ಮಾತುಗಳ ಕಾರಣವಾಗಿಯೇ ಜನಪದರ ಭಾವಕೋಶದಲ್ಲಿ ಅಂಬೇಡ್ಕರ್ ಬಾಬಾ ಎಂದು ಚಿರಸ್ಥಾಯಿಯಾದರು.

ಭಾರತೀಯ ಮಹಿಳೆ ಮತ್ತು ಹಿಂದೂ ಕೋಡ್ ಬಿಲ್ ಯಾವುದೇ ಸಾಮಾಜಿಕ ಬಲಾವಣೆ ಬಯಸುವುದಾದರೂ ಅದಕ್ಕೆಪೂರಕವಾಗಿ ಕಾನೂನು ಚೌಕಟ್ಟು ಒದಗಿಸಬೇಕು ಎನ್ನುವುದು ಅಂಬೇಡ್ಕರ್ ನಿಲುವು. ಮಹಿಳಾ ಹಕ್ಕುಗಳ ಪರವಾಗಿ ಖಚಿತ ನಿಲುವು ಹೊಂದಿದ್ದ ಅಂಬೇಡ್ಕರರ ಸಂವಿಧಾನವು ಮಹಿಳೆಯರಿಗೆ ಪುರುಷರಿಗಿರುವ ಎಲ್ಲ ಸವಲತ್ತುಗಳನ್ನೂ ನೀಡಿತು. ಜೊತೆಗೆ 15(3), 51(ಎ) ಕಲಮುಗಳು ವಿಶೇಷ ಸವಲತ್ತುಗಳನ್ನು ನೀಡಲು ಅವಕಾಶ ಕಲಿಸಿದವು.

ಇವತ್ತು ಹಿಂದೂಗಳಲ್ಲಿ ಪ್ರಚಲಿತವಿದ್ದ ಹಲವು ತೆರನಾದ ಮದುವೆ ಪದ್ಧತಿಗಳನ್ನು ರದ್ದುಗೊಳಿಸಿ ಒಂದೇ ವಿಧದ ಮದುವೆಯ ವ್ಯವಸ್ಥೆ ಕಲ್ಪಿಸಿದರು. ಮಹಿಳೆಗೆ ಆಸ್ತಿ ಹಕ್ಕು ಮತ್ತು ದತ್ತು ತೆಗೆದುಕೊಳ್ಳುವ ಹಕ್ಕು ಕೊಡುವುದು. ಮಹಿಳೆಗೆ ವಿಚ್ಛೇದನದ ಹಕ್ಕು ನೀಡುವುದು. ಈ ಮಸೂದೆಯು ಎಂಟು ಭಾಗಗಳನ್ನೊಳಗೊಂಡಿತ್ತು. ಹಿಂದೂ ಯಾರು ಮದುವೆ/ ದತ್ತು ಸ್ವೀಕಾರ/ ಪೋಷಕತ್ವ/ಅವಿಭಕ್ತ ಕುಟುಂಬದ ಆಸ್ತಿ ಕಾನೂನು/ ಹೆಣ್ಣುಮಕ್ಕಳ ಆಸ್ತಿ ಹಕ್ಕು/ ವಾರಸುದಾರಿಕೆ ಹಾಗೂ ಜೀವನಾಂಶಗಳ ಕುರಿತ ಕಾನೂನುಗಳನ್ನು ಅದರಲ್ಲಿ ರೂಪಿಸಲಾಗಿತ್ತು. ಈ ಪರಿಷ್ಕರಿತ ಆವೃತ್ತಿಯಲ್ಲಿ ಮಹಿಳೆಗೆ ವಿಚ್ಛೇದನಕ್ಕೆ ಅವಕಾಶವಿತ್ತು. ವಿಧವೆಗೆ ಗಂಡನ ಆಸ್ತಿಯ ಪೂರಾ ಹಕ್ಕು ಹಾಗೂ ಮದುವೆಯಾದ ಹೆಣ್ಣುಮಕ್ಕಳಿಗೆ ತವರಿನ ಆಸ್ತಿ ಹಕ್ಕುಗಳು ಪ್ರಸ್ತಾದಿಸಲ್ಪಟ್ಟಿದೆ.

ಇವತ್ತು ಬಾಬಾ ಸಾಹೇಬರ ಕೃಪಾಶೀರ್ವಾದದಿಂದ ಎಲ್ಲಾ ಕ್ಷೇತ್ರಗಳಲ್ಲಿ 33 % ಅವಕಾಶ ಸಿಕ್ಕಿದ್ದು, ಪ್ರತಿಶತ 80 ಹೆಣ್ಣು ಮಕ್ಕಳು ಎಲ್ಲಾ ಕ್ಷೇತ್ರಗಳಲ್ಲಿಯೂ ಸಮರ್ಥರಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದು ದೇಶದ ಪ್ರಗತಿಯಲ್ಲಿ ಮೊದಲ ಪಾಲು ಪಡೆದಿದ್ದಾರೆ. ಹೆಚ್ಚು ಮಹಿಳಾ ಉದ್ಯೋಗಿಗಳನ್ನು ಪಡೆದಿರುವ ಕ್ಷೇತ್ರದ ಅಭಿವೃದ್ಧಿ ಇಂದು ಉನ್ನತ ಮಟ್ಟದಲ್ಲಿದೆ.

ಹೆಣ್ಣು ತಾಯಿ ಮಗಳು ಅಕ್ಕ ತಂಗಿ ಹೆಂಡತಿ ಗೆಳತಿ ಹೀಗೆ ಎಲ್ಲ ಸಂಬಂಧಗಳನ್ನು ಅಚುಕಟ್ಟಾಗಿ ನಿಭಾಯಿಸುವ ಶಕ್ತಿ ಇದೆ, ಹೆಣ್ಣಿನಿಂದಲೇ ಎಲ್ಲಾ ಎನ್ನುವುದು ಅರಿತ ಬಾಬಾಸಾಹೇಬರು ಅಚಲ ನಂಬಿಕೆ ಇಟ್ಟುಕೊಂಡು ಇವತ್ತು ಸಂವಿಧಾನಾತ್ಮಕವಾಗಿ ಸುಖಃ ಶಾಂತಿಯ ಜೀವನ ಮಾಡಲು ಅವಕಾಶ ಮಾಡಿಕೊಟ್ಟ ಮಹಾನ್ ಪುರುಷನಿಗೆ ಹೃತ್ಪೂರ್ವಕ ನಮನಗಳು.

ಹಂಪಿ ಟೈಮ್ಸ್
HAMPI TIMES
ಭಾನುವಾರ/Sunday 13.04.2025



## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**13–04–2025 – ಭಾನುವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಚಿತ್ತ |
| ಯೋಗ | : ಹರ್ಷಣ |
| ಕರಣ | : ಬಾಳವ |
| ಸೂರ್ಯೋದಯ | : 06:09:17 |
| ಸೂರ್ಯಾಸ್ತ | : 18:45:48 |
| ರಾಹು ಕಾಲ | : 17:11–18:46 |
| ಯಮಘಂಡ ಕಾಲ | : 12:28–14:02 |
| ಗುಳಿಕ ಕಾಲ | : 15:37–17:11 |



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 12–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1585.12 ಅಡಿ |
| ಒಳ ಹರಿವು | 1223 ಕ್ಯುಸೆಕ್ |
| ಹೊರ ಹರಿವು | 1278 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.404 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1579.02 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 172 ಕ್ಯುಸೆಕ್ |
| ಸಾಮರ್ಥ್ಯ | 4.011 ಟಿಎಂಸಿ |

ನಿರಂತರ ಪ್ರಯತ್ನ
ನಿಮ್ಮನ್ನು ಎಂದೂ
ಸೋಲಲು ಬಿಡುವುದಿಲ್ಲ.

# ಇಂದು ಪಂಚಮಸಾಲಿ ಸಂಘಟನಾ ಸಭೆ

■ **ಹಂಪಿ ಟೈಮ್ಸ್ ಕೊಟ್ಟೂರು**

ವೀರಶೈವ ಲಿಂಗಾಯತ ಪಂಚಮಸಾಲಿ ಸಂಘಟನಾ ಸಭೆ ಭಾನುವಾರ 11 ಗಂಟೆಗೆ ಕೊಟ್ಟೂರಿನ ಹ್ಯಾಳ್ಯಾ ರಸ್ತೆಯಲ್ಲಿನ ಶ್ರೀ ಮಹಾದೇವ ಇಂಟ್ರನ್ಯಾಷನಲ್ ಸ್ಕೂಲ್ ನಲ್ಲಿ ನಡೆಯಲಿದೆ ಎಂದು ತಾಲೂಕು ಅಧ್ಯಕ್ಷರು ಚಾಪಿ ಚಂದ್ರಪ್ಪ ತಿಳಿಸಿದ್ದಾರೆ.

ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳು, ಸಾನಿಧ್ಯವಹಿಸುವರು. ಜಿಲ್ಲಾಧ್ಯಕ್ಷ ಪ್ರಕಾಶ ಪಾಟೀಲ್ ಅದ್ಯಕ್ಷತೆವಹಿಸುವರು.

ಹರಿಹರ ಪೀಠದ ಪ್ರಧಾನ ಧರ್ಮದರ್ಶಿ ಬಿ ಸಿ ಉಮಾಪತಿ, ಆಡಳಿತಧಿಕಾರಿ ಡಾ.ರಾಜಕುಮಾರ, ಸಂಘದ ರಾಜ್ಯಾಧ್ಯಕ್ಷ ಸೋಮನಗೌಡ ಎಮ್ ಪಾಟೀಲ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪರಮೇಶ ಪಟ್ಟಣಶೆಟ್ಟಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲೆಯ ಎಲ್ಲಾ ತಾಲೂಕಗಳ ಸಮಾಜದ ಹಿರಿಯರು ಯುವಕರು ಮಹಿಳೆಯರು, ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ತಿಳಿಸಿದ್ದಾರೆ.

# ಛಾಯಾಗ್ರಾಹಕಿ ಪಾರ್ವತಿಗೆ ಛಾಯಾಶ್ರೀ ಪ್ರಶಸ್ತಿ



ಕರ್ನಾಟಕ ಫೋಟೋಗ್ರಾಫರ್ ಸಂಘದ ರಾಜ್ಯ ಘಟಕದ ವತಿಯಿಂದ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ರಾಜ್ಯ ಮಟ್ಟದ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಹೊಸಪೇಟೆ ತಾಲೂಕು ತುಂಗಭದ್ರಾ ಛಾಯಾಗ್ರಾಹಕರ ಸಂಘದ ಸದಸ್ಯೆ ಪಾರ್ವತಿ ಇವರ ಸೇವೆಯನ್ನ ಗುರುತಿಸಿ ಅವರಿಗೆ ಛಾಯಾಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಘದ ಕಾರ್ಯದರ್ಶಿ ಎಂ.ಸಂಜಯ್ ಕುಮಾರ್‌ಗೆ ಕೃತಜ್ಞತ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕಾರ್ಯಕ್ರಮ ಆಯೋಜಕರ ಪ್ರಮುಖರು ಉಪಸ್ಥಿತರಿದ್ದರು.

ಆನಂದ ಬಾಣ







# ವಕ್ಫ್ ತಿದ್ದುಪಡಿ ವಿರೋಧಿಸಿ ಪ್ರತಿಭಟನೆ

## ವಕ್ಫ್ ಆದಾಯ ಬಡವರ ಅಭಿವೃದ್ಧಿಗೆ ಬಳಕೆ ಎಂದ ಹುಡಾ ಅಧ್ಯಕ್ಷ ಇಮಾಮ್



■ **ಹಂಪಿ ಟೈಮ್ಸ್ ಹೊಸಪೇಟೆ**

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೊಳಿಸಲಿರುವ ವಕ್ಫ್ ತಿದ್ದುಪಡಿ ಮಸೂದೆ 2025 ನ್ನು ವಿರೋಧಿಸಿ ಸ್ಥಳೀಯ ಅಂಜುಮನ್ ಕಮಿಟಿ ನೇತೃತ್ವದಲ್ಲಿ ಸಾವಿರಾರು ಮುಸ್ಲಿಂ ಸಮುದಾಯದವರು ನಗರದ ತಹಶೀಲ್ದಾರರ ಕಚೇರಿ ಹತ್ತಿರ ಶನಿವಾರ ಮುಖ್ಯರಸ್ತೆ ತಡೆ ನಡೆಸಿ ಬೃಹತ್ ಪ್ರತಿಭಟನೆ ನಡೆಸಿದರು.

ಸ್ಥಳೀಯ ಅಂಜುಮನ್ ಕಮಿಟಿಯ ಅಧ್ಯಕ್ಷರು ಹಾಗು ಹುಡಾ ಅಧ್ಯಕ್ಷ ಹೆಚ್.ಎನ್. ಮೊಹಮ್ಮದ್ ಇಮಾಮ್ ನಿಯಾಜಿ ಮಾತನಾಡಿ, ಮುಸ್ಲಿಂ ಕಾನೂನಿನ್ವಯ ವಕ್ಫ್ ಎಂದರೆ ಧಾರ್ಮಿಕ ಮತ್ತು ದತ್ತಿ ಉದ್ದೇಶಗಳಿಗಾಗಿ ದೇವರ ಹೆಸರಿನಲ್ಲಿ ಅರ್ಪಿಸಲಾದ ಆಸ್ತಿಯಾಗಿದೆ. ವಕ್ಫ್ ಆದಾಯವನ್ನು ಮಸೀದಿಗಳ ನಿರ್ವಹಣೆ, ಸಮುದಾಯದ ಬಡ ಜನರ ಅಭಿವೃದ್ಧಿಗೆ ಬಳಸಲಾಗುತ್ತದೆ. ಬಿಜೆಪಿ ಧಾರ್ಮಿಕ ಆಧಾರದ ಮೇಲೆ ದೇಶವನ್ನು ವಿಭಜಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ ಅವರು, ಈ ಯೋಜನೆಗಳು ಫಲ ನೀಡುವುದಿಲ್ಲ ಎಂದರು.

ಸಾವಿರಾರು ಪ್ರತಿಭಟನಕಾರರು ನಗರದ ಈದ್ಗಾ ಮೈದಾನದಿಂದ ಮೆರವಣಿಗೆ ಆರಂಭಿಸಿ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದ ಮಾರ್ಗವಾಗಿ ತಹಶಿಲ್ದಾರರ ಕಚೇರಿ ಮುಂದೆ ರಸ್ತೆ ತಡೆದು ಕೇಂದ್ರ ಸರ್ಕಾರವು ವಕ್ಫ್ ತಿದ್ದುಪಡಿ ಮಸೂದೆ ಹಿಂಪಡೆಯುವಂತೆ ಆಗ್ರಹಿಸಿದರು. ಪ್ರತಿಭಟನಕಾರರು ಕೇಂದ್ರ ಸರ್ಕಾರ, ಪ್ರಧಾನಿ ನರೇಂದ್ರಮೋದಿ, ಅಮಿತ್ ಷಾ ವಿರುದ್ಧ ಘೋಷಣೆ ಕೂಗಿದರು. ಬಳಿಕ ಜಿಲ್ಲಾಧಿಕಾರಿಗಳ ಮುಖಾಂತರ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಧೀಶರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಅಂಜುಮನ್ ಕಮಿಟಿ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎನ್. ಮೊಹಮ್ಮದ್ ಇಮಾಮ್ ನಿಯಾಜಿ, ಅಂಜುಮನ್ ಪದಾಧಿಕಾರಿಗಳಾದ ಬಿ. ಅನ್ಸರ್ ಭಾಷಾ, ಅಬೂಬ್ ಕಾರ್, ಕೆ. ಮೋಸೀನ್, ಸದ್ದಾಂ ಹುಸೇನ್, ಫೈರೋಜ್ ಖಾನ್, ಗುಲಾಂ ರಸೂಲ್, ಡಾ. ದರ್ವೇಶ್, ಸಮಾಜದ ಮುಖಂಡರಾದ ಬಡಾವಲಿ, ಅಬ್ದುಲ್ ಖಾದರ ರಫಾಯಿ, ಅಸ್ಲಾಂ ಮಳಿಗಿ, ಪ್ರಗತಿಪರ ಸಂಘಟನೆ ಮುಖಂಡರಾದ ಜಂಭಯ್ಯ ನಾಯಕ್, ಕರುಣಾನಿಧಿ ಸಾವಿರಾರು ಮುಸ್ಲಿಂ ಭಾಂಧವರು ಭಾಗವಹಿಸಿದ್ದರು.

# ಇಂದು ಶ್ಯಾಮನೂರು ಶಿವಶಂಕರಪ್ಪಗೆ ಚರಂತಾರ್ಯ ಶ್ರೀ ಪ್ರಶಸ್ತಿ ಪ್ರದಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ನಂದಿಪುರ ಪುಣ್ಯಕ್ಷೇತ್ರದ ಮಹಾಮಹಿಮರಾದ ಶ್ರೀ ಗುರುಚರಂತಪ್ಪಜ್ಜ ಮಹಾಸ್ವಾಮಿಗಳವರ 21ನೇ ಸ್ಮರಣೋತ್ಸವ ಹಾಗೂ ಚರಂತಾರ್ಯ ಶ್ರೀ ಪ್ರಶಸ್ತಿ ಪ್ರದಾನ, ಗಂಥ ಲೋಕಾರ್ಪಣೆ, ಉಚಿತ ಆರೋಗ್ಯ ತಪಾಸಣೆ ಏ.13 ರಂದು ಸಂಜೆ 5ಕ್ಕೆ ದಾವಣಗೆರೆ ಶ್ರೀಶೈಲಮಠದಲ್ಲಿ ಜರುಗಲಿದೆ.



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಹಾಗೂ ಹಿರಿಯ ಶಾಸಕ ಶ್ಯಾಮನೂರು ಶಿವಶಂಕರಪ್ಪ ಅವರಿಗೆ ಚರಂತಾರ್ಯ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರು ದಿವ್ಯ ಸಾನ್ನಿಧ್ಯವಹಿಸುವರು. ಬಿಳಿಕಿ ಹಿರೇಮಠದ ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮಿಗಳು, ತಾವರಕೆರೆ ಶಿಲಾಮಠದ ಡಾ.ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಕಂಚೂರಿನ ಶ್ರೀ ಸವಿತಾನಂದ ಸ್ವಾಮಿಗಳು ಉಪಸ್ಥಿತರಿರಲಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಪೊಲೀಸ್ ಅಧೀಕ್ಷಕಿ ಉಮಾ ಪ್ರಶಾಂತ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕನ್ನಡ ವಿವಿ ಸಹಾಯಕ ಕುಲಸಚಿವ ಡಾ. ಎಂ.ಎಂ.ಶಿವಪ್ರಕಾಶ ಅವರು ಹೆಚ್.ಎಂ. ಗುರುಬಸವರಾಜಯ್ಯ ಸಂಪಾದಿತ ಭವ್ಯ ಬೆಳಕು ಗ್ರಂಥ ಲೋಕಾರ್ಪಣೆ ಮಾಡಲಿದ್ದಾರೆ. ನಿವೃತ್ತ ಪ್ರಾಂಶುಪಾಲ ಪ್ರೊ.ಎಚ್.ಎ. ಭಿಕ್ಷಾವರ್ತಿಮಠ ಅವರು ಗ್ರಂಥಾವಲೋಕನ ಮಾಡಲಿದ್ದಾರೆ ಎಂದು ನಂದಿಪುರದ ಡಾ. ಮಹೇಶ್ವರ ಶಿವಾಚಾರ್ಯ ಶ್ರೀಗಳು ತಿಳಿಸಿದ್ದಾರೆ.

